ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೨, ಜುಲೈ ೨೦೧೪



Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೨
ಮಹಾವೀರಾಚಾರ್ಯ ... ಪು. ೩

ಚಿಲುಮೆಯ ಒಳಗೆ

ಪುಸ್ತಕ ವಿಮರ್ಶೆ ... ಪು. ೫
ವಿಚಾರ-ವಿಹಾರ ... ಪು. ೬
ರಾಂ ರಾಮ! ಹಾಸ್ಯ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೧
ಕಾವ್ಯ ಚಿಲುಮೆ ... ಪು. ೧೨
ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ವಿಶ್ಲೇಷಣೆ ... ಪು. ೧೩
ಪದ ಪುಂಜ ... ಪು. ೧೪
ರಂಗೋಲಿ ... ಪು. ೧೪

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೫
ವಿಜ್ಞಾನ ... ಪು. ೧೧
ಅಲ್ಲಲ್ಲಿ ಏನೇನು ... ಪು. ೧೧

ಚಿಲುಮೆಯ ಒಳಗೆ

ಸೈಕಲ್ ಪಯಣ - ಕೊನೆಯ ಕಂತು ಪುಟ ೧೫ ರಲ್ಲಿ ...

ಈಗಿನ ಸುದ್ದಿ

ಸಿಡ್ನಿಯಲ್ಲಿ ಪ್ರದರ್ಶನಗೊಂಡ ಗಜಕೇಸರಿ ಚಲನಚಿತ್ರ - ವರದಿ

ನಮ್ಮ ಕನ್ನಡ ಚಿತ್ರರಂಗಕ್ಕೆ ಹಲವಾರು ಪ್ರಖ್ಯಾತ ಚಿತ್ರಗಳನ್ನು ಕೊಡುಗೆಯಾಗಿ ಕೊಟ್ಟಿರುವ ಎಸ್. ಕೃಷ್ಣರವರ ನಿರ್ದೇಶನದಲ್ಲಿ ಮೂಡಿಬಂದ ಮತ್ತೊಂದು ಚಿತ್ರ ಗಜಕೇಸರಿ. ನಮ್ಮ ಕನ್ನಡನಾಡಿನಲ್ಲಿ ತಕ್ಕಮಟ್ಟಿಗೆ ಹಿರಿಮೆಗರಿಮೆಗಳನ್ನು ಗಳಿಸಿಕೊಂಡು ಜೂನ್ ೨೨ರಂದು ಲಿವರ್ಪೂಲಿನ ಇವೆಂಟ್ ಸಿನಿಮಾಸ್ ನಲ್ಲಿ ಒಂದು ಪ್ರದರ್ಶನ ಕೊಟ್ಟಿದೆ.

ಯೋಗರಾಜ್ ಭಟ್ ಅವರ ಮಾತಿನ ಚಾತುರ್ಯತೆಗೆ ನಟ ಯಶ್ ಅವರ ಪರಿಚಿತ ಕೀಟಲೆ ಧ್ವನಿಯೊಂದಿಗೆ, ನೋಡುವ ಪ್ರೇಕ್ಷಕರಿಗೆ ಹಾಸ್ಯದ ಸವಿಯನ್ನೂ ನೀಡಿದೆ. ನಮ್ಮ ಸಿಡ್ನಿ ಕನ್ನಡಿಗರಿಗೆ ಒಂದು ಕ್ಷಣ ನಮ್ಮ ತಾಯಿನಾಡಿನ ನೆನಪನ್ನು ಕೊಡುವುದರಲ್ಲಿ ಗಜಕೇಸರಿ ಚಿತ್ರ ಯಶಸ್ವಿಯಾಗಿದೆ. ಪ್ರಮುಖವಾಗಿ ನಮ್ಮ ಕನ್ನಡನಾಡಿನ ಕಾಡಿನ ಸೊಬಗನ್ನು ಎತ್ತಿ ತೋರಿಸುತ್ತದೆ.

ಚಿತ್ರದ ಮೊದಲ ಭಾಗದಲ್ಲಿ ಧರ್ಮದ ರಕ್ಷಣೆಗೆ ಒಂದು ಮಠ ಹೇಗೆ ವಜ್ರಾಕವಚವಾಗಬಹುದು ಎಂದು ತಿಳಿಸಿದ್ದರೆ, ಅದರ ಜೊತೆಗೆ ಹೊರ ಪ್ರಾಂತ್ಯದ ಜನರು ನಮ್ಮ ನಾಡಿನಲ್ಲಿ ಮಾಡುತ್ತಿರುವ ಅನ್ಯಾಯವನ್ನು ಚಿತ್ರದಲ್ಲಿ ಕಾಣಬಹುದಾಗಿದೆ.

ಒಬ್ಬ ಅತೀಸಾಮಾನ್ಯ ಮನುಷ್ಯನಾಗಿ ನಮ್ಮ ನಾಯಕನ ಪರಿಚಯವಾಗುತ್ತದೆ. ಪ್ರಾಯದ ಮನುಷ್ಯನಿಗೆ ತನ್ನ ಆಸೆಯನ್ನು ಬಲಿ ಕೊಡಲಾಗದೆ, ತನ್ನ ತಂದೆಯ ಹರಕೆಗೆ ಕಪ್ಪುಕಾಣಿಕೆ ಒಪ್ಪಿಸುವ ಕುತುಹಲಕಾರಿ ಕಥೆಯಾಗಿ ಚಿತ್ರವು ರೂಪಗೊಂಡಿದೆ.

ಚಿತ್ರದ ಮಧ್ಯದಲ್ಲಿ ಹಾಸ್ಯ ಕಲಾವಿದರಾದ ಸಾಧುಕೋಕಿಲ ಮತ್ತು ರಂಗಾಯಣ ರಘುರವರ ಹಾಸ್ಯಚಾತುರ್ಯತೆ ಮನೋರಂಜನೆಯನ್ನು ಕೊಡುತ್ತದೆ. ನಮ್ಮ ಕನ್ನಡನಾಡಿನ ವರ್ಣನೆ, ಕಾಡಿನ ದೃಶ್ಯಗಳು ನಮ್ಮ ಮನ್ನಸನ್ನು ಮುದಗೊಳಿಸುತ್ತದೆ.

ಚಿತ್ರದಲ್ಲಿ ಕಾಡು ಜನರ ಇಂದಿನ ಅಸಹಾಯಕ ಸ್ಥಿತಿಯನ್ನು ಹಾಗು ಮನುಷ್ಯ ಮತ್ತು ಪ್ರಾಣಿಯ ನಡುವಿನ ಆತ್ಮೀಯ ಭಾವವನ್ನು ಹಾಸುಹೊಕ್ಕಾಗಿ ಚಿತ್ರಿಸಿದ್ದಾರೆ. ಸ್ವಲ್ಪ ಮಟ್ಟಿಗೆ ತೆಲುಗುವಿನ ಮಗಧೀರ ಚಿತ್ರವನ್ನು ಹೋಲುತ್ತದೆ. ಸರ್ಕಾರದ ಹೆಸರಿನಲ್ಲಿ ಅನಕ್ಷರಸ್ತರಿಗೆ ಆಗುತ್ತಿರುವ ಅನ್ಯಾಯವನ್ನೂ ಚಿತ್ರವು ಒಳಗೊಂಡಿದೆ. ಮುಖ್ಯವಾಗಿ ಅಸಹಾಯಕ ಜನರಿಗೆ ಆಗುತ್ತಿರುವ ಅನ್ಯಾಯ, ಶೋಷಣೆಗಳನ್ನು ಸದೆಬಡಿಯಲು ಗಜಕೇಸರಿಯಂಥವರು ಹುಟ್ಟಿ ಬರುತ್ತಾರೆ ಎಂಬುದು ಈ ಚಿತ್ರದ ಸಾರಾಂಶವಾಗಿದೆ.

ಹೊರ ದೇಶದಲ್ಲಿರುವ ನನ್ನ ಕನ್ನಡದ ಬಂಧುಗಳೇ, ಇಲ್ಲಿನ ಯಾಂತ್ರಿಕಬದುಕಿಗೆ ಹೊಂದುಕೊಂಡು ಪರಕೀಯರೊಡನೆ ಪ್ರತಿದಿನ ಅವರ ಭಾಷೆಯಲ್ಲಿ ಮಾತನಾಡುವ ನಮಗೆ, ಕನ್ನಡ ಚಿತ್ರಮಂದಿರಕ್ಕೆ ಹೊದಾಕ್ಷಣ, ನಮ್ಮ ತಾಯಿನಾಡಿಗೆ ಹೋದ ಭಾವನೆ ಮೂಡುವುದರಲ್ಲಿ ಸಂಶಯವಿಲ್ಲ ಅಲ್ಲವೇ?. ನಮ್ಮಂಥಹ ಕನ್ನಡಿಗರನ್ನು ರಂಜಿಸಲೆಂದೇ ಗಡಿದಾಟಿ ಬಂದಿರುವ ನಮ್ಮ ಭಾಷೆಯ ಚಿತ್ರಕ್ಕೆ ಇನ್ನೂ ಹೆಚ್ಚು ಹೆಚ್ಚು ಕನ್ನಡಿಗರು ಬಂದರೆ ಅದೇ ನಮ್ಮ ನಾಡಿಗೆ ನಾವು ಕೊಡುವ ಕಿರು ಕಾಣಿಕೆಯಂತಾಗುತ್ತದೆ.▪

ವರದಿ ಮತ್ತು ಚಿತ್ರಗಳು: ನಾಗಶ್ರೀ ಹರ್ಷ

ಕೇಳೋಣ

ಯಮ ಲೋಕದಲ್ಲಿ ಕನ್ನಡ! (a short skit) ವೀಕ್ಷಿಸಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ

(Click picture to view)

ಮುಂದಿರುವ ತಿಂಗಳ ಪ್ರಮುಖ ದಿನಗಳು ಪುಟ ೨ ರಲ್ಲಿ ...

ಸಿಡ್ನಿ ಕನ್ನಡ ಶಾಲೆಯ ಯುಗಾದಿ ಹಬ್ಬದಂದು ಸಿಂಧು ಮತ್ತು ನಿರೀಕ್ಷ ಹಾಡಿದ ಹಾಡು ಕೇಳಲು ಚಿತ್ರ ಕ್ಲಿಕ್ ಮಾಡಿ

(Click picture to view)

ನೋಡೋಣ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

"ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ..." ಎಂದು ದಾಸರೂ ಒಳಗೊಂಡಂತೆ ಅನಾದಿಕಾಲದಿಂದಲೂ ಮತ್ತು ಈಗಲೂ ಸಹ ಅನೇಕ ಜ್ಞಾನಿಗಳು ಕರೆ ಕೊಡುತ್ತಲೇ ಬಂದಿರುತ್ತಾರೆ. ಏತಕ್ಕೆ ಇಷ್ಟು ಮಹತ್ವ ಈ ನಶ್ವರ ಬದುಕಿಗೆ! ಜೀವ ಮತ್ತು ನಿರ್ಜೀವ ಪ್ರಭೇದವೆಂದಷ್ಟೇ ಸೀಮಿತಗೊಳಿಸದೆ, ಅದರ ಆಯಾಮದ ಆಳಕ್ಕೆ ಇಳಿದು ನೋಡಿದಾಗ ಮನುಷ್ಯನು ಇತರ ಪ್ರಾಣಿಗಳಿಗಿಂತ ವಿಧವಿಧ ದೃಷ್ಟಿಕೋನದಲ್ಲಿ ವಿಷಯವನ್ನು ಗ್ರಹಿಸಬಲ್ಲ ಶಕ್ತಿಯುಳ್ಳವನು ಎಂದು ತಿಳಿಯುತ್ತದೆ.

ಇದರಿಂದ ಕಲ್ಲು ಬರೀ ಕಲ್ಲಾಗಿ ಕಾಣಿಸದೆ, ಅದರಿಂದ ಕಲಾಕೃತಿ ಕೂಡ ಮಾಡಬಹುದೆಂಬ ತಿಳುವಳಿಕೆ ನಮಗೆ ಬರುತ್ತದೆ. ಇದೇ ಕಲ್ಲಿನಿಂದ ಕಟ್ಟಡವನ್ನೂ ಕಟ್ಟಬಹುದು, ಅಣೆಕಟ್ಟನ್ನು ನಿರ್ಮಿಸಬಹುದು. ಹೀಗೆ ಬಹು ಉಪಯೋಗಿಯಾಗಿ ಈ ಕಲ್ಲು ಎಂಬ ಜಡವಸ್ತುವನ್ನು ಬಳಸಿಕೊಳ್ಳಬಹುದು. ಇದು ಮನುಷ್ಯನ ವಿವೇಚನೆಯಿಂದ ಸಾಧ್ಯವಾಗಿದೆ. ಇಷ್ಟರವರೆಗೆ ನಾನು ಹೇಳಿದ್ದು ಕಲ್ಲಿನ ಸದುಪಯೋಗವನ್ನು. ಇದೇ ಕಲ್ಲು, ನಾವು ಬಳಸುವ ರೀತಿಯಿಂದ ಸಹಜೀವಿಗಳಿಗೆ ಕೆಡುಕನ್ನೂ ತರಬಹುದು ಎಂಬುದನ್ನು ಹೇಳಬೇಕಿಲ್ಲವಷ್ಟೇ. ಪದಾರ್ಥವನ್ನು ಸರಿಯಾದ ರೀತಿಯಲ್ಲಿ ಬಳಸುವ ಜಾಣ್ಮೆ ನಮಗೆ ತಿಳಿದಿರಬೇಕು.

ನರನು ಸಮಾಜದಲ್ಲಿ ಸಹಬಾಳ್ವೆ ಮಾಡಲು ಬೇಕಾದದ್ದು ಮುಖ್ಯವಾಗಿ ಅರಿವು. ಅನೇಕ ಸಿದ್ಧಾಂತಗಳು ಇದನ್ನು ಮಾನವಧರ್ಮವೆಂದು ಬೋಧಿಸಿದೆ. ಕೆಲವರಿಗೆ ಜೀವನದ ಅನುಭವದಿಂದ ತಿಳಿದುಬಂದರೆ, ಅನೇಕರಿಗೆ ಇದು ಗುರುವಿನ ಮೂಲಕ ತಿಳಿದುಬರುತ್ತದೆ. ಗುರು ಎಂಬ ಸಂಸ್ಕೃತ ಶಬ್ದವನ್ನು "ಗುಕಾರೋಂಧಕಾರತ್ವಾತ್ ರುಕಾರೋ ತನ್ನಿವಾರಕಃ" ಎಂದು ಅರಿತುಕೊಳ್ಳಲಾಗಿದೆ. ಅಂದರೆ "ಗು" ಅಕ್ಷರವು ಅಂಧಕಾರ ಸೂಚಕವು ಮತ್ತು "ರು" ಅಕ್ಷರವು ನಾಶಪಡಿಸುವವನು ಎಂದು. ಹೀಗಾಗಿ ವಿಷಯದ ಬಗ್ಗೆ ಇರುವ ಕತ್ತಲೆಯನ್ನು ನಿವಾರಿಸಿ, ಒಳ್ಳೆಯ ಮಾರ್ಗ ತೋರುವ ಯಾರೇ ಆಗಲಿ ಗುರು ಸ್ಥಾನದಲ್ಲಿ ನಿಲ್ಲುತ್ತಾರೆ.

ಕಿರಿಹಿರಿಯರಿಂದೆನ್ನದೆ ಮುಕ್ತಮನಸ್ಸಿನಿಂದ ನಮಗೆ ಬರುವ ತತ್ವಗಳು, ಉಪದೇಶಗಳು, ತಿದ್ದುವಿಕೆಗಳನ್ನು ಸ್ವೀಕರಿಸಿದರೆ, ನಮ್ಮ ಸುತ್ತಮುತ್ತಲ ಎಲ್ಲರಲ್ಲೂ ಗುರುತತ್ವವನ್ನು ಕಾಣಬಹುದು. ನಮ್ಮ ನಮ್ಮ ಜೀವನಕ್ಕೆ ಸರಿಹೊಂದುವ ಆಯಾ ಬೋಧನೆಗಳನ್ನು ಅಳವಡಿಸಿಕೊಂಡಿದ್ದೇ ಆದರೆ, ಯಾವ ಕಲ್ಲನ್ನೇ ಅಗಲಿ ಹೂವನ್ನಾಗಿ ಅರಳಿಸಬಹುದು. ಆಷಾಡಮಾಸದ ಹುಣ್ಣಿಮೆಯನ್ನು ಗುರುಪೂರ್ಣಿಮೆಯಾಗಿ ಆಚರಿಸುತ್ತಾರೆ. ಈ ಸಂದರ್ಭದಲ್ಲಿ, "ಹೊರನಾಡ ಚಿಲುಮೆಗೆ" ಅನನ್ಯವಾಗಿ ಸಲಹೆ, ಮಾರ್ಗದರ್ಶನ ಕೊಡುತ್ತಿರುವ ಎಲ್ಲರಿಗೂ, ನಮ್ಮ ಪ್ರಣಾಮಗಳನ್ನು ಅರ್ಪಿಸುತ್ತಿದ್ದೀವಿ.

ಈ ಸಂಚಿಕೆಯಲ್ಲಿ ಶ್ರೀ ಮಾಲುರವರು ವಿಚಾರ-ವಿಹಾರದಲ್ಲಿ ಒಂದು ಒಳ್ಳೆಯ ಗುರುತತ್ವವನ್ನು ಹಂಚಿಕೊಂಡಿದ್ದಾರೆ. ಜ್ಞಾನ ಸಂಪಾದಿಸಲು ಇದೊಂದು ಯೋಗ್ಯ ಬರಹ. ಹಿರಿಯರಾದ ಶ್ರೀ ಮಧುಸೂದನರವರು ಪ್ರಾಚೀನ ಭಾರತದ ಗಣಿತಜ್ಞರಾದ ಮಹಾವೀರಾಚಾರ್ಯರ ಬಗ್ಗೆ ತಿಳಿಸಿಕೊಡುತ್ತಾ, ಅವರ ಸೂತ್ರಗಳನ್ನು ಬಳಸಿ ಗಣಿತದ ಸಮಸ್ಯೆಯನ್ನು ಹೇಗೆ ಬಿಡಿಸಬಹುದು ಎಂದು ಓದುಗರನ್ನು ಪ್ರಶ್ನಿಸುತ್ತಾರೆ. ಗಣಿತದ ಒಂದು ಪುಟ್ಟ ಪರೀಕ್ಷೆ ತೆಗೆದುಕೊಳ್ಳಿ. ಶ್ರೀ ನಾಗಶ್ರೀಲರವರ ಸೈಕಲ್ ಪಯಣದ ಕೊನೆಯ ಕಂತು ಈ ಸಂಚಿಕೆಯಲ್ಲಿದೆ. ಅವರ ಉತ್ಸಾಹಭರಿತ ಅನುಭವಕಥನಕ್ಕೆ ನಮ್ಮೆಲ್ಲರ ಧನ್ಯವಾದವಿರಲಿ. ವಧುಪರೀಕ್ಷೆಯಲ್ಲ, ಇದು ವರಪರೀಕ್ಷೆಯ ಕಾಲ ಎನ್ನುತ್ತ ನಗೆ ಚಟಾಕಿ ಹಾರಿಸುತಿದ್ದಾರೆ ಶ್ರೀ ರಾಮನಾಥ್ ರವರು. ಎಂದಿನಂತೆ, ಹಲವಾರು ವೈವಿಧ್ಯಮಯ ಅಂಕಣಗಳಿರುವ ಈ ಸಂಚಿಕೆಗೆ ನಿಮ್ಮ ಪ್ರೀತಿ ಇರಲಿ.

ಪೊಳ್ಳು ಹೊಗಳಿಕೆಗಿಂತ ಜ್ಞಾನಿಗಳ ಸಾತ್ವಿಕ ಕೋಪ ನಮ್ಮ ಬದುಕಿಗೆ ಒಳಿತೆನ್ನುತಾರೆ ಹಿರಿಯರು. ಹೀಗಾಗಿ ನಮ್ಮನ್ನು ದೂರುತ್ತಿದ್ದಾರೆಂದು ಸುಮ್ಮನೆ ಬೇಸರಪಟ್ಟುಕೊಳ್ಳುವುದಕ್ಕಿಂತ ಅವರು ಹೇಳುವ ಮಾತಿನಲ್ಲಿ ನಮ್ಮ ಜೀವನಕ್ಕೆ ಹಿತವಿದ್ದರೆ, ಅದನ್ನು ಗುರುತತ್ವವೆಂದು ಸ್ವೀಕರಿಸುವುದು ಒಳಿತಲ್ಲವೇ! ▪

ಮುಂದೆರಡು ತಿಂಗಳ ಪ್ರಮುಖ ದಿನಗಳು

ಜುಲೈ - ಶ್ರೀ ಜಯನಾಮ ಸಂವತ್ಸರ, ಉತ್ತರಾಯಣ, ಗ್ರೀಶ್ಮ/ವರ್ಷ ಋತು, ಆಶಾಡ/ಶ್ರಾವಣ ಮಾಸ (JULY)

08 ಮಂ -ಸರ್ವತ್ರ ಏಕಾದಶಿ
12 ಶ - ವ್ಯಾಸ ಹುಣ್ಣಿಮೆ/ಗುರು ಪೂರ್ಣಿಮ
15 ಮಂ - ಸಂಕಷ್ಟಹರ ಗಣಪತಿ ಪೂಜೆ
22 ಮಂ - ಕಾಮದ ಏಕಾದಶಿ
25 ಶು - ಶಬ್-ಇ- ಕಾದರ್, ಜುಮತ್-ಉಲ್-ವಿದ
26 ಶ - ಭೀಮನ ಅಮಾವಾಸ್ಯೆ
27 ಭಾ - ಶ್ರಾವಣ ಮಾಸ ಆರಂಭ
29 ಮಂ - ಮಂಗಳ ಗೌರೀ ವ್ರತ, ರಂಜಾನ್
31 - ಗು - ನಾಗರ ಚೌತಿ

ಆಗಸ್ಟ್ - ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ (AUGUST)

01 ಶು - ನಾಗಪಂಚಮಿ
07 ಗು - ಪವಿತ್ರಾ ಏಕಾದಶಿ
8 ಶು - ವರಮಹಾಲಕ್ಷ್ಮಿ ವ್ರತ
10 ಭಾ - ಹುಣ್ಣಿಮೆ/ರಕ್ಷಾ ಬಂಧನ/ಋಗ್ ಯಜುರ್ ಉಪಾಕರ್ಮ
13 ಬು - ಸಂಕಷ್ಟಹರ ಗಣಪತಿ ಪೂಜೆ
15 ಶು - ಭಾರತ ಸ್ವಾತಂತ್ರ್ಯ ದಿನಾಚರಣೆ
17 ಭಾ - ಶ್ರೀ ಕೃಷ್ಣ ಜನ್ಮಾಷ್ಟಮಿ
21 ಗು - ಸರ್ವತ್ರ ಏಕಾದಶಿ
24/25 - ಅಮಾವಾಸ್ಯೆ
26 ಮಂ - ಭಾದ್ರಪದ ಮಾಸ ಆರಂಭ
28 ಗು - ಸ್ವರ್ಣ ಗೌರಿ ವ್ರತ
29 ಶು - ಗಣೇಶ ಚತುರ್ಥಿ

ಪರಿಚಯ: ಪ್ರಾಚೀನ ಭಾರತದ ಕೆಲವು ಪ್ರಖ್ಯಾತ ಗಣಿತಜ್ಞರನ್ನು ಕಾಲಾನುಕ್ರಮವಾಗಿ ಈ ಕೆಳಗಿನ ಪಟ್ಟಿಯಲ್ಲಿರುವಂತೆ ನಮೂದಿಸಬಹುದು:

ಆರ್ಯಭಟ	**ಜನನ: ಕ್ರಿ.ಶ. ೪೭೬**
ಬ್ರಹ್ಮಗುಪ್ತ	ಜನನ: ಕ್ರಿ.ಶ. ೫೯೮
ಶ್ರೀಧರ	ಸುಮಾರು ಕ್ರಿ.ಶ. ೭೫೦
ಮಹಾವೀರಾಚಾರ್ಯ	ಸುಮಾರು ಕ್ರಿ.ಶ. ೮೫೦
ಭಾಸ್ಕರಾಚಾರ್ಯ (ಎರಡನೆಯ ಭಾಸ್ಕರ)	ಜನನ: ಕ್ರಿ.ಶ. ೧೧೧೪

ಇವರೇ ಅಲ್ಲದೆ ವರಾಹಮಿಹಿರ, ಪೃಥದಕ್ ಸ್ವಾಮಿ, ಮೊದಲನೆಯ ಭಾಸ್ಕರ, ಎರಡನೆಯ ಆರ್ಯಭಟ ಮುಂತಾದವರೂ ಈ ಮೇಲಿನ ಕಾಲವ್ಯಾಪ್ತಿಯಲ್ಲೇ ಸೇರತಕ್ಕಂಥವರು - ಈ ಪಟ್ಟಿಯನ್ನು ಕೊಟ್ಟಿರುವ ಉದ್ದೇಶ, ಮಹಾವೀರನ ಸ್ಥಾನ ಈ ಉದ್ದಾಮ ಪಂಡಿತರ ಪರಂಪರೆಯಲ್ಲಿ ಎಲ್ಲಿ ಸೇರುತ್ತದೆ ಎಂಬುದನ್ನು ಸ್ಥೂಲವಾಗಿ ತಿಳಿಸುವುದಕ್ಕೆ ಮಾತ್ರ.

ಮಹಾವೀರನು ಅಚ್ಚ ಕನ್ನಡಿಗ. ರಾಷ್ಟ್ರಕೂಟದ ಅರಸ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದ ಜೈನ ಸಂನ್ಯಾಸಿ. ಆಗಿನ ಕಾಲದ ಭಾರತದ ಗಣಿತಜ್ಞರೆಲ್ಲರೂ, ಖಗೋಳಶಾಸ್ತ್ರ (astronomy) ದಲ್ಲೂ ಪರಿಣತರಾಗಿರುತ್ತಿದ್ದರು. ಮಹಾವೀರಾಚಾರ್ಯನು ಇದಕ್ಕೆ ಅಪವಾದ - ಇವನು ಕೇವಲ ಗಣಿತವನ್ನೇ ವಿಶೇಷವಾಗಿ ಅಧ್ಯಯನ ಮಾಡಿದನೆಂದು ಕಂಡುಬರುತ್ತದೆ. ಈತನು ರಚಿಸಿದ ಮೇರುಗ್ರಂಥ "**ಗಣಿತಸಾರಸಂಗ್ರಹ**". ಸಂಸ್ಕೃತದಲ್ಲಿ ಬರೆದಿರುವ ಈ ಪುಸ್ತಕವು ನೂರಾರು ವರ್ಷಗಳ ಕಾಲ ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ, ಅತ್ಯಂತ ಜನಪ್ರಿಯವಾಗಿದ್ದ ಪಠ್ಯಪುಸ್ತಕವಾಗಿದ್ದಿತು. [ಅನಂತರ ಕ್ರಿ.ಶ. ೧೧೫೦ರಲ್ಲಿ ಭಾಸ್ಕರಾಚಾರ್ಯನು ರಚಿಸಿದ **ಲೀಲಾವತಿ** (ಅಂಕಗಣಿತ ಮತ್ತು ರೇಖಾಗಣಿತ) ಭಾರತದ ಆದ್ಯಂತ ಬಹುಕಾಲ, ಬ್ರಿಟಿಷರು ತಮ್ಮ ವಿದ್ಯಾಕ್ರಮವನ್ನು ೧೯ನೆಯ ಶತಮಾನದಲ್ಲಿ ಜಾರಿ ತರುವವರೆಗೆ, ಲೋಕಪ್ರಿಯವಾಗಿ ಬಳಕೆಯಲ್ಲಿದ್ದ ಗ್ರಂಥ]

ಗ್ರಂಥದ ಪ್ರಕಟಣೆ: ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದ ವೇಳೆಗೆ, ಎಂದರೆ ಇಂದಿಗೆ ಸುಮಾರು ೧೫೦ ವರ್ಷಗಳ ಹಿಂದೆಯೇ, **ಆರ್ಯಭಟೀಯ**, ಬ್ರಹ್ಮಗುಪ್ತನ **ಬ್ರಹ್ಮಸ್ಫುಟಸಿದ್ಧಾಂತ**, ವರಾಹಮಿಹಿರನ **ಪಂಚಸಿದ್ಧಾಂತಿಕ**, ಭಾಸ್ಕರಾಚಾರ್ಯನ **ಲೀಲಾವತಿ**, **ಬೀಜಗಣಿತ** ಮತ್ತು **ಸಿದ್ಧಾಂತಶಿರೋಮಣಿ** ಮುಂತಾದ ಗ್ರಂಥಗಳೆಲ್ಲವೂ ಇಂಗ್ಲಿಷ್ ಮತ್ತು ಇತರ ಪಾಶ್ಚಾತ್ಯ ಭಾಷೆಗಳಿಗೆ ಅನುವಾದಮಾಡಲ್ಪಟ್ಟಿದ್ದವು (ಈ ಗ್ರಂಥಗಳನ್ನು ಇನ್ನೂ ನೂರಾರು ವರ್ಷಗಳ ಹಿಂದೆಯೇ ಅರಬ್ಬಿ ಮತ್ತು ಪಾರ್ಸೀ ಭಾಷೆಗಳಿಗೆ ತರ್ಜುಮೆ ಮಾಡಿದ್ದರು ಎಂಬ ಮಾತು ಬೇರೆ). ಹೀಗಿರುವಾಗ ಕ್ರಿ.ಶ, ೧೯೦೦ ರ ಸುಮಾರಿನಲ್ಲಿ ಮದ್ರಾಸು ಪ್ರಾಂತ್ಯದ Director of Public Instruction ಆಗಿದ್ದ G.H. Stewart ಎಂಬುವರು, ಆಗತಾನೆ ಮದ್ರಾಸಿನ ಪ್ರಾಚ್ಯ ಹಸ್ತಪ್ರತಿಗಳ ಗ್ರಂಥಾಲಯದ ಮೇಲ್ವಿಚಾರಕರಾಗಿ ನೇಮಕಗೊಂಡಿದ್ದ ಪ್ರೊಫೆಸರ್ ಎಂ. ರಂಗಾಚಾರ್ಯರನ್ನು ಆ ಗ್ರಂಥಾಲಯದಲ್ಲಿ ಹಿಂದೂ ಗಣಿತದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಯಾವುದಾದರೂ ಪುಸ್ತಕಗಳಿದ್ದಲ್ಲಿ ಅವನ್ನು ಪರಿಷ್ಕರಿಸಿ, ಇಂಗ್ಲಿಷ್ ಭಾಷಾಂತರ ಮತ್ತು ಟಿಪ್ಪಣಿ ಸಹಿತವಾಗಿ ಪ್ರಕಟಿಸಬೇಕೆಂದು ಸಲಹೆ ಮಾಡಿದರು. ರಂಗಾಚಾರ್ಯರು ಸಂತೋಷದಿಂದ ಈ ಕೆಲಸವನ್ನು ಒಪ್ಪಿಕೊಂಡು ಸಂಶೋಧನೆ ಮಾಡಿದಾಗ, **ಗಣಿತಸಾರಸಂಗ್ರಹದ** ಮೂರು ಹಸ್ತಪ್ರತಿಗಳು ಆ ಗ್ರಂಥಾಲಯದಲ್ಲಿ ಇದ್ದವೆಂದು ಕಂಡುಬಂದಿತು.

ಮೊದಲನೆಯ ಹಸ್ತಪ್ರತಿ ಕಾಗದದ ಮೇಲೆ ಬರೆದದ್ದು. ಇದರಲ್ಲಿ **ಗಣಿತಸಾರಸಂಗ್ರಹದ** ಮೊದಲ ಐದು ಅಧ್ಯಾಯಗಳು ಮಾತ್ರ (ಸಂಸ್ಕೃತದ ಟೀಕೆಯೊಂದಿಗೆ) ಅಡಕವಾಗಿದ್ದುವು. ಎರಡನೆಯ ಮತ್ತು ಮೂರನೆಯ ಪ್ರತಿಗಳು ಓಲೆಗರಿಯ ಮೇಲೆ ಕನ್ನಡ ಭಾಷೆಯ ಮೇಲೆ ಬರೆದಿದ್ದವು. ಈ ಎರಡರ ಒಂದರಲ್ಲಿ ಮೊದಲನೆಯ ಐದು ಅಧ್ಯಾಯಗಳು, ಇನ್ನೊಂದರಲ್ಲಿ ರೇಖಾಗಣಿತಕ್ಕೆ ಸಂಬಂಧಿಸಿದ್ದ ಏಳನೆಯ ಅಧ್ಯಾಯ ವಿದ್ದುವು. ಕನ್ನಡ ಪ್ರತಿಗಳ ವಿಶೇಷವೆಂದರೆ ಅವುಗಳಲ್ಲಿ ಲೆಕ್ಕಗಳಿಗೆ ಉತ್ತರಗಳನ್ನೂ, ರೇಖಾಗಣಿತಕ್ಕೆ ಬೇಕಾಗುವ ಚಿತ್ರಗಳನ್ನೂ ಕೊಟ್ಟಿದ್ದರು (ಮೂಲದಲ್ಲಿ ಚಿತ್ರಗಳಿರಲಿಲ್ಲವೆಂದು ಕಾಣುತ್ತದೆ). ಆದರೆ ಮೂರೂ ಹಸ್ತಪ್ರತಿಗಳು ಅಪೂರ್ಣವೆಂದು ಗೋಚರವಾಯಿತು. ಆದ್ದರಿಂದ ಬೇರೆ ಪ್ರತಿಗಳು ಇತರ ಗ್ರಂಥಾಲಯಗಳಲ್ಲಿರಬಹುದೇ ಎಂದು ಹುಡುಕಿದಾಗ ಮತ್ತೆರಡು ಕನ್ನಡ ಪ್ರತಿಗಳು ರಂಗಾಚಾರ್ಯರಿಗೆ ದೊರಕಿದವು: ೧. ಮೈಸೂರಿನ ಪ್ರಾಚ್ಯ ಗ್ರಂಥಾಲಯದ ಮಹಾದೇವಶಾಸ್ತ್ರಿಗಳು ಎರುವಲಾಗಿ ಕೊಟ್ಟದ್ದು (ಇದು ಒಬ್ಬ ಜೈನಪಂಡಿತರಲ್ಲಿದ್ದ ಓಲೆಗರಿ ಪ್ರತಿಯ ನಕಲು): ಇದು **ಗಣಿತಸಾರಸಂಗ್ರಹದ** ಎಲ್ಲ ಅಧ್ಯಾಯಗಳೂ ಇರುವ ಸಂಪೂರ್ಣ ಪ್ರತಿ. ೨. ಮೂಡಬಿದ್ರಿಯ (ಆಗ ಇದು ಮದ್ರಾಸ್ ಪ್ರಾಂತ್ಯದಲ್ಲಿತ್ತು) ಜೈನ ಮಠದಲ್ಲಿದ್ದ ಓಲೆಗರಿ ಹಸ್ತಪ್ರತಿಯ ಕಾಗದದ ನಕಲು; ಇದನ್ನು ರಂಗಾಚಾರ್ಯರಿಗೆ ದೊರಕಿಸಿಕೊಟ್ಟವರು ಮದ್ರಾಸಿನ ಸಂಸ್ಕೃತ ಶಾಲೆಗಳ ಸಬ್-ಇನ್‌ಸ್ಪೆಕ್ಟರ್ ಆಗಿದ್ದ ಕೃಷ್ಣಮಾಚಾರ್ಯ ಮತ್ತು ಮೂಡಬಿದ್ರಿಯ ವೆಂಕಟರಮಣಯ್ಯ ಎಂಬ ಇಬ್ಬರು ಮಹನೀಯರು. ಈ ಪ್ರತಿಯೂ ಸಂಪೂರ್ಣವಾಗಿದ್ದು ಲೆಕ್ಕಗಳನ್ನೂ, ಉತ್ತರಗಳನ್ನೂ ಒಳಗೊಂಡಿತ್ತು. ರಂಗಾಚಾರ್ಯರು ಎಷ್ಟು ಪ್ರಯತ್ನಿಸಿದರೂ ಅವರಿಗೆ ಬೇರಾವ ಪ್ರತಿಗಳೂ ದೊರಕಲಿಲ್ಲ.

ಮುಂದಿನ ಪುಟ ನೋಡಿ ...

ಕೆಲವು ಪ್ರತಿಗಳು ಅಪೂರ್ಣವಾದುವು ಮಾತ್ರವಲ್ಲ, ಸಂಪೂರ್ಣ ಪ್ರತಿಗಳಲ್ಲೂ ಹಲವಾರು ತಪ್ಪುಗಳಿದ್ದವಂತೆ. ಅವುಗಳನ್ನು ಬೆಂಗಳೂರು ಮತ್ತು ಮದ್ರಾಸಿನಲ್ಲಿದ್ದ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳ ಪಂಡಿತರ ಸಹಾಯದಿಂದ ತಿದ್ದಿ, ಇಂಗ್ಲೀಷಿಗೆ ಅನುವಾದ ಮಾಡಲು ಅನೇಕ ವರ್ಷಗಳು ಬೇಕಾದವು. ಅಂತೂ ಕೊನೆಗೆ ೧೯೧೨ರಲ್ಲಿ ಗ್ರಂಥವು ಪ್ರಕಟವಾಗುವವೇಳೆಗೆ, ರಂಗಾಚಾರ್ಯರನ್ನು ಪ್ರೋತ್ಸಾಹಿಸಿ ಪುಸ್ತಕವನ್ನು ಬೆಳಕಿಗೆ ತರಲು ಕಾರಣರಾದ Stewart ಅವರು ನಿಧನರಾಗಿದ್ದರು. ಇದರಿಂದ ಆಚಾರ್ಯರಿಗೆ ತುಂಬ ವ್ಯಥೆಯಾಯಿತೆಂದು ಅವರೇ ಹೇಳಿಕೊಂಡಿದ್ದಾರೆ.

ಗಣಿತಸಾರಸಂಗ್ರಹ: ಈ ಗ್ರಂಥ ಪ್ರಾರಂಭವಾಗುವ ಮಂಗಳಾಚರಣದ ಮೊದಲಿರುವುದು ಜೈನ ತೀರ್ಥಂಕರ ಮಹಾವೀರನನ್ನು ಸ್ಮರಣೆ ಮತ್ತು ಅನಂತರ ಅಮೋಘವರ್ಷ ನೃಪತುಂಗನ ಆಳ್ವಿಕೆಯ ಹೊಗಳಿಕೆ, ಕೊನೆಗೆ ಆಶೀರ್ವಚನ. ಮುಂದಿನ ಶ್ಲೋಕಗಳಾದ **ಗಣಿತಶಾಸ್ತ್ರದ ಪ್ರಶಂಸೆ**ಯಲ್ಲಿ ಮಹಾವೀರಾಚಾರ್ಯನು - ವೈದಿಕ, ಲೌಕಿಕ, ವಾಣಿಜ್ಯ, ಪಾಕಶಾಸ್ತ್ರ, ಛಂದಸ್ಸು. ಶಿಲ್ಪಕಲೆ, ವೈದ್ಯ, ಭೂಗೋಳ - ಖಗೋಳಶಾಸ್ತ್ರಗಳು ಇತ್ಯಾದಿ-ಇತ್ಯಾದಿ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಗಣಿತದ ಅವಶ್ಯಕತೆಯನ್ನು ತಿಳಿಸಿ, ಕೊನೆಗೆ

ಬಹುಭಿರ್ವಿಪ್ರಲಾಪೈಃ ಕಿಂ ತ್ರೈಲೋಕ್ಯೇ ಚರಾಚರೇ।
ಯತ್ಕಿಂಚಿದ್ವಸ್ತು ತತ್ಸರ್ವಂ ಗಣಿತೇನ ವಿನಾ ನ ಹಿ ॥

"ಬಹಳ ವ್ಯರ್ಥ ಪ್ರಲಾಪ ಮಾಡುವುದರಿಂದೇನು? ಸ್ಥಾವರ-ಜಂಗಮಗಳನ್ನೊಳಗೊಂಡಿರುವ ಮೂರು ಲೋಕಗಳ ವಸ್ತುಗಳು ಯಾವುವೂ ಗಣಿತದ ಸಹಾಯವಿಲ್ಲದೆ ಇರಲಾರವು" ಎಂದು ಉದ್ಗರಿಸುತ್ತಾನೆ!

ಗಣಿತಕ್ಕೆ ನೇರವಾಗಿ ಸಂಬಂಧಿಸಿದಂತೆ, ಪುಸ್ತಕವು ಉದ್ದಗಲ, ಸಮಯ, ನಾಣ್ಯ, ತೂಕ ಮುಂತಾದುವುಗಳ ಕೋಷ್ಟಕಗಳಿಂದ ಮೊದಲುಗೊಂಡು, ಗುಣಾಕಾರ, ಭಾಗಹಾರ, ವರ್ಗ (square) , ವರ್ಗಮೂಲ (square root), ಘನ (cube), ಘನಮೂಲ (cube root), ಭಿನ್ನರಾಶಿಗಳು (fractions), ತ್ರೈರಾಶಿಕ (rule of three), ಪಂಚ-ಸಪ್ತ-ನವರಾಶಿಕಗಳು, ಕ್ಷೇತ್ರವ್ಯವಹಾರ (geometry), ಖಾತವ್ಯವಹಾರ (excavations), ಛಾಯಾವ್ಯವಹಾರ (shadows) ಮತ್ತಿತರ ಆಗಿನ ಕಾಲಕ್ಕೆ ಅಗತ್ಯವಾಗಿದ್ದ ಗಣಿತದ ವಿಷಯಗಳನ್ನು ವಿವರಿಸುತ್ತದೆ.

ಗಣಿತಸಾರಸಂಗ್ರಹದಲ್ಲಿಸುಮಾರು ೮೭೦ ಲೆಕ್ಕಗಳಿವೆ. ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಕೊಟ್ಟಿದ್ದೇನೆ. ಇವೆರಡೂ ಇಲ್ಲಿ ಸುಮಾರು ಹತ್ತನೆಯ ತರಗತಿಯವರೆಗೆ ಓದಿರುವವರಿಂದ ಬಿಡಿಸಬಲ್ಲವು.

೧. **ಷಡ್ಭಾಗಮಮಾಮ್ರರಾಶೌ ರಾಜಾ ಶೇಷಸ್ಯ ಪಂಚಮಂ ರಾಜ್ಞೀ।**
ತುರ್ಯತ್ರ್ಯಂಶದಲಾನಿ ತ್ರಯೋಽಗ್ರಹೀಷುಃ ಕುಮಾರವರಾಃ ॥
ಶೇಷಾಣಿ ತ್ರೀಣಿ ಚೂತಾನಿ ಕನಿಷ್ಠೋ ದಾರಕೋಽಗ್ರಹೀತ್।
ತಸ್ಯ ಪ್ರಮಾಣಮಾಚಕ್ಷ್ವ ಪ್ರಕೀರ್ಣಕವಿಶಾರದ ॥

ಒಂದು ಮಾವಿನ ಹಣ್ಣಿನ ರಾಶಿಯಲ್ಲಿ. ರಾಜನು (೧/೬) ಭಾಗವನ್ನೂ. ಉಳಿದರಲ್ಲಿ ರಾಣಿಯು (೧/೫) ಭಾಗವನ್ನೂ, ಹಿರಿಯ ಮೂರು ರಾಜಕುಮಾರರು ಉಳಿದ ಹಣ್ಣುಗಳಲ್ಲಿ ಕ್ರಮಶ: (೧/೪), (೧/೩) ಮತ್ತು (೧/೨) ಭಾಗವನ್ನೂ ತೆಗೆದುಕೊಂಡರು. ಕಿರಿಯ ಕುಮಾರನು ಉಳಿದ ಮೂರು (೩) ಹಣ್ಣುಗಳನ್ನು ತೆಗೆದುಕೊಂಡನು. ವಿವಿಧ ಭಿನ್ನರಾಶಿಗಳ ವಿಶಾರದನೇ! ಆ ರಾಶಿಯಲ್ಲಿಎಷ್ಟು ಹಣ್ಣುಗಳಿದ್ದವೆಂದು ತಿಳಿಸು.

೨. **ದ್ವೇ ಯೋಜನೇ ಪ್ರಯಾತಿ ಹಿ ಪೂರ್ವಗತಿಸ್ತ್ರೀಣಿ ಯೋಜನಾನ್ಯಪರಃ।**
ಉತ್ತರತೋ ಗಚ್ಛತಿ ಯೋ ಗತ್ವಾಸೌ ತದ್ದಿನಾನಿ ಪಂಚಾಥ ॥
ಗಚ್ಛನ್ ಕರ್ಣಾಕೃತ್ಯಾ ಕತಿಭಿರ್ದಿವಸೈರ್ನರಂ ಸಮಪ್ನೋತು।
ಉಭಯೋರ್ಯುಗಪದ್ಗಮನಂ ಪ್ರಸ್ಥಾನದಿನಾನಿ ಸದೃಶಾನಿ ॥

ಒಬ್ಬನು ಪೂರ್ವ ದಿಕ್ಕಿನಲ್ಲಿ ದಿನಕ್ಕೆ ಎರಡು ಯೋಜನದಂತೆ ನಡೆಯುತ್ತಾನೆ. ಇನ್ನೊಬ್ಬನು ದಿನಕ್ಕೆ ಮೂರು ಯೋಜನದಂತೆ ಉತ್ತರದಿಕ್ಕಿನಲ್ಲಿ ಐದು ದಿನ ನಡೆದು ನಂತರ ತ್ರಿಭುಜದ ಕರ್ಣದ (hypotenuse) ರೇಖೆಯಲ್ಲಿ ನಡೆದರೆ, ಅಲ್ಲದೆ ಇಬ್ಬರು ನಡೆದ ದಿನಗಳೂ, ಹೊರಟ ದಿವಸವೂ ಒಂದೇ ಆಗಿದ್ದರೆ, ಮೊದಲನೆಯವನನ್ನು ಎಷ್ಟು ದಿನಗಳಲ್ಲಿ ಮತ್ತೆ ಸಂಧಿಸುತ್ತಾನೆ?

ಇಂಥ ಪ್ರಶ್ನೆಗಳನ್ನು ಬಿಡಿಸಲು ಮಹಾವೀರನು ಕೊಟ್ಟಿರುವ ಸೂತ್ರಗಳನ್ನೂ, ಉತ್ತರಗಳನ್ನೂ ಬೇರೆ ಪುಟದಲ್ಲಿ ಕೊಟ್ಟಿದೆ. ಆಧುನಿಕ ವಿಧಾನಗಳು ಸುಲಭತರವೆಂದು ನಿಮಗನಿಸಬಹುದು. (ಉತ್ತರಗಳಿಗೆ ಪುಟ 18 ನೋಡಿ)▪

ಲೇಖಕರು: ಬೇಲೂರು ರಾಮಮೂರ್ತಿ

ಕಾದಂಬರಿಯಲ್ಲಿ ಕೌಟುಂಬಿಕ ಸಮಸ್ಯೆಗಳು

ಭಾಗ - ೨

... ನಮ್ಮ ಮನೆಯವರ ವಿಚಾರ ನಿಮಗೆ ಪೂರ್ತಿಯಾಗಿ ತಿಳಿದಿಲ್ಲ. ನಮ್ಮ ತಾಯಿಗೆ ಜಾತಿಯ ಅಭಿಮಾನ ತುಂಬಾ. ಅವರದು ಬರೀ ಸಂಪ್ರದಾಯ ಮನೋಭಾವವಲ್ಲ. ಅವರೇನೂ ಮುಂದುವರಿದ ಈ ಕಾಲವನ್ನು ನೋಡಿಲ್ಲದೇ ಇಲ್ಲ. ಅವರಿಗೆ ಎಲ್ಲಾ ಗೊತ್ತಿದೆ. ಬದಲಾಯಿಸುತ್ತಿರುವ ಸಮಾಜದ ಸ್ಥಿತಿ ಗತಿ ಎಲ್ಲಾನೂ ಅವರು ಬಲ್ಲರು. ಹೋಟೆಲಿನಲ್ಲಿ ಸಹ ಊಟ ತಿಂಡಿ ಮಾಡ್ತಾರೆ. ಅದು ನಿಮಗೂ ಗೊತ್ತಿದೆ. ಅವರ ದೃಷ್ಟಿಯಲ್ಲಿ ನಮ್ಮ ಜಾತಿ ಅನ್ನುವ ಅಭಿಮಾನ ಅತಿರೇಕವಾಗಿದೆ. ಎಂಥವನೇ ಆಗಲಿ ನಮ್ಮವನು, ಮೂರುನಾಮ ಎಳಕೊಂಡವನು ಆದರೆ ಆಯಿತು. ಇತರ ಪಂಗಡದವರು ಎಷ್ಟಾದರೂ ನಮ್ಮ ಸಮ ಇಲ್ಲ ಅಂತ ಅವರ ಭಾವನೆ. ನಮ್ಮ ಮದುವೆಗೆ ಅವರು ಎಂದೂ ಒಪ್ಪುವುದಿಲ್ಲ ಎನ್ನತ್ತಾಳೆ. ಅಲ್ಲಿಗೆ ಪರಿಸ್ಥಿತಿಯ ಅರಿವು ಆನಂದನಿಗೆ ಸಂಪೂರ್ಣವಾಗಿ ಆಗುತ್ತದೆ.

ಮನಶ್ಯಾಂತಿಗಾಗಿ ಆನಂದ ಊರೂರು ಅಲೆದು ಹಿಂದಿರುಗಿದಾಗ ವಿನತೆಯ ಸ್ನೇಹಿತೆ ಜಗದಾಂಬ ಆನಂದನನ್ನು ಭೇಟಿಯಾಗಿ ವಿನತೆಯ ಮನಸ್ಥಿತಿಯನ್ನು ವಿವರಿಸಿ ಈಗ ನೀವು ಅವಳನ್ನು ಮದುವೆಯಾಗುವ ನಿರ್ಧಾರ ಮಾಡಿ ನೀವೇ ಮುಂದೆ ಹೆಜ್ಜೆ ಇಡಬೇಕು ಅಂತ ಒತ್ತಾಯ ತರುತ್ತಾಳೆ. ವಿನತೆಯ ಸ್ವಾಭಿಮಾನತನವನ್ನೂ ವಿವರಿಸುತ್ತಾಳೆ. ಪ್ರೀತಿ ಪ್ರೇಮದ ವಿಚಾರದಲ್ಲಿ ಆನಂದ ಗೊಂದಲದಲ್ಲಿ ಸಿಕ್ಕಿಬಿದ್ದಂತಾಗಿತ್ತು. ವಿನತೆಯ ಸ್ವಭಾವವನ್ನು ಗಮನಿಸುತ್ತಿದ್ದ ಅವಳ ಅಕ್ಕ ವಿಜಯ ತಾನು ಮದುವೆಯಾಗಿದ್ದು ನಮ್ಮ ಜನವೇ, ಆದರೆ ನೀನು ಪ್ರೀತಿಸುತ್ತಿರುವುದು ನಮ್ಮ ಜನವಲ್ಲ ಇದು ಅಮ್ಮನಿಗೆ ಹಿಡಿಸುವುದಿಲ್ಲ ಅಂತ ಗೊತ್ತಿದ್ದರೂ ಅದನ್ನು ಮುಂದುವರಿಸಿಕೊಂಡು ಹೀಗೆ ಕೊರಗುವುದರಲ್ಲಿ ಅರ್ಥವಿಲ್ಲ ಅಂತ ಸಲಹೆ ನೀಡುತ್ತಾಳೆ. ಆನಂದ ವಿನತೆ ಇಬ್ಬರೂ ಒಂದು ದಿನ ಕೂತು ಈ ವಿಚಾರ ದೀರ್ಘವಾಗಿ ಮಾತಾಡಿದಾಗ ಆನಂದ ಇಬ್ಬರೂ ಒಟ್ಟಿಗೆ ಕೆರೆಗೆ ಬಿದ್ದು ಸಾಯುವ ಮಾತೂ ಆಡುತ್ತಾನೆ.

ಮುಂದೆ ಆನಂದ ವಿನತೆ ಇಬ್ಬರೂ ತಲಕಾಡಿಗೆ ಹೋಗಿ ಒಂದು ದಿನ ಇದ್ದು ಅಲ್ಲಿ ಎಲ್ಲವನ್ನೂ ಮರೆತು ಒಂದುಗೂಡುತ್ತಾರೆ. ವಿನತೆ ಆನಂದನನ್ನು ತನ್ನ ಗಂಡ ಎಂದೇ ನಂಬಿಬಿಟ್ಟಿರುತ್ತಾಳೆ. ವಿನತೆಯ ಚಲನ ವಲನಗಳಲ್ಲಿ ಅನುಮಾನ ಕಂಡ ವಿನತೆಯ ತಾಯಿ ಒಂದು ದಿನ ಕಾಲೇಜಿನಲ್ಲಿ ಒಂದು ಕೋಣೆಯಲ್ಲಿ ಆನಂದ ಮತ್ತು ವಿನತೆ ಇಬ್ಬರೂ ಜೋರಾಗಿ ನಗುತ್ತಾ ಮಾತಾಡುತ್ತಿರುವಾಗಲೇ ಬಂದು ವಿನತೆಯನ್ನು ಬೈದು ಕರೆದುಕೊಂಡು ಹೋಗುತ್ತಾರೆ. ಆನಂತರ ವಿನತೆಯ ಚಲನ ವಲನದ ಮೇಲೆ ಆಕೆಯ ಹದ್ದಿನ ಕಣ್ಣು ಇರುತ್ತದೆ. ಏನೇ ಆಗಲಿ ವಿನತೆ ನಮ್ಮ ಜಾತಿಯ ಹುಡುಗನನ್ನು ಬಿಟ್ಟು ಬೇರೆಯವನನ್ನು ಮದುವೆಯಾಗದಂತೆ ನೋಡಿಕೊಳ್ಳುವ ಹಠ ಆಕೆಯಲ್ಲಿರುತ್ತದೆ. ಮುಂದೆ ಆಕೆ ಸ್ವಲ್ಪ ನಿರಾಳವಾಗಿ ವಿನತೆಯ ಕಡೆ ದೃಷ್ಟಿ ಬೇರಯೇ ಕಡೆ ಹೋಗೋದು ವಿನತೆಯ ಅಕ್ಕ ವಿಜಯಳಿಗೆ ಗಂಡು ಮಗುವಾಗಿ ಮನೆಯಲ್ಲಿ ಸಂಭ್ರಮ ನೆಲೆಸಿದಾಗ. ಆದರೆ ವಿನತೆಯನ್ನು ಆನಂದನಿಂದ ಶಾಶ್ವತವಾಗಿ ದೂರ ಮಾಡಬೇಕೆಂದು ಅವಳ ತಾಯಿ ವಿನತೆಯನ್ನು ಮುಂದೆ ಓದಕ್ಕೆ ಬಿಡದೇ, ಹಣಕಾಸಿನ ತಾಪತ್ರಯದ ನೆಪವೊಡ್ಡಿ ಅವಳನ್ನು ಟಿ.ನರಸೀಪುರದ ಹೈಸ್ಕೂಲ್ ಮೇಡಂ ಕೆಲಸ ಒಪ್ಪಿಕೊಳ್ಳುವಂತೆ ಮಾಡುತ್ತಾಳೆ. ಹೀಗಾಗಿ ಆನಂದ ಮೈಸೂರಿನಲ್ಲಿ ವಿನತೆ ತಿರಮಕೂಡಲು ನರಸೀಪುರದಲ್ಲಿ ನೆಲೆಸುವಂತಾಗುತ್ತದೆ. ಆದರೆ ವಿನತೆಯನ್ನು ನೋಡಲೇಬೇಕೆಂದು ಆನಂದನೇ ತಿರಮಕೂಡಲು ನರಸೀಪುರಕ್ಕೆ ಹೋಗುತ್ತಾನೆ. ಅಲ್ಲಿ ವಿನತೆಯ ಜೊತೆಗೆ ಅವಳ ತಮ್ಮನೂ ಇರುತ್ತಾನೆ. ಮನೆಯಲ್ಲಿ ಆನಂದನಿಗೆ ಊಟ ಹಾಕಿ ಅದೇ ತಟ್ಟೆಯಲ್ಲಿ ತಾನೂ ಊಟ ಮಾಡುವ ಆಸೆಯಿಂದ ತಮ್ಮನನ್ನು ವಿಳ್ಳೇದೆಲೆ ತರುವ ನೆಪ ಹಾಕಿ ಹೊರಗೆ ಕಳಿಸಿ ಆನಂದ ಊಟ ಮಾಡಿ ಬಿಟ್ಟಿದ್ದ ತಟ್ಟೆಗೆ ತಾನೂ ಅನ್ನ ಬಡಿಸಿಕೊಂಡು ಊಟ ಮಾಡಿ ಗಂಡ ಊಟ ಮಾಡಿ ಬಿಟ್ಟ ತಟ್ಟೆಯಲ್ಲಿ ಹೆಂಡತಿ ಊಟ ಮಾಡಿದರೆ ಅವಳಿಗೆ ಶ್ರೇಯಸ್ಸು ಅಂತಾಳೆ. ಆನಂದ ಮದುವೆಯ ಬಗೆಗೆ ಮಾತಾಡಿದಾಗ ಇನ್ನೊಂದು ನಾಲ್ಕು ವರ್ಷ ನಾವು ಒಬ್ಬರನ್ನೊಬ್ಬರು ಭೇಟಿಯಾಗದೇ ಇರೋಣ. ಅಷ್ಟರಲ್ಲಿ ತಮ್ಮಂದಿರದ್ದು ಓದು ಮುಗಿಯುತ್ತೆ. ಆನಂತರ ನಮ್ಮ ನಿರ್ಧಾರ ನಾವು ತಗೋಬಹುದು, ಈಗ ನಾವು ದುಡುಕಿದರೆ ಅಮ್ಮ ಸ್ವಾಭಿಮಾನತನದಿಂದ ನನ್ನಿಂದ ಒಂದು ಕಾಸನ್ನೂ ಮುಟ್ಟದೇ ತಮ್ಮಂದಿರ ಓದು ಅರ್ಧಕ್ಕೇ ನಿಲ್ಲುವ ಹಾಗಾಗುತ್ತೆ ಅಂತ ತನ್ನ ಅಸಹಾಯಕತೆಯನ್ನು ತೋರುತ್ತಾಳೆ. ಕಾಲೇಜಿನ ಮೇಡಂ ವರದಮ್ಮ ತಮ್ಮ ಕಥೆಯನ್ನು ಹೇಳುತ್ತಾ ಏನೇ ಬರಲಿ ನಮ್ಮ ಒಂದು ನಿರ್ಧಾರಕ್ಕೆ ನಾವು ಬದ್ಧರಾಗಿರಬೇಕು, ಹಾಗೇ ನೀನು ಆನಂದನ ವಿಚಾರದಲ್ಲಿ ಗಟ್ಟಿ ನಿರ್ಧಾರ ತಗೋಬೇಕು ಮಿಕ್ಕಿದ್ದನ್ನು ಬಿಡಬೇಕು ಅಂತ ಸಲಹೆ ಕೊಟ್ಟು ತಮ್ಮ ಬದುಕಿನ ಕಥೆಯನ್ನು ತೆರೆದಿಡುತ್ತಾರೆ. ಎಲ್ಲರೂ ವರದಮ್ಮ ವಿಧವೆ ಅಂದುಕೊಂಡಿರುತ್ತಾರೆ. ಆದರೆ ವರದಮ್ಮ ಇನ್ನೂ ಚಿಕ್ಕವಳಾಗಿರುವಾಗ ಅವಳಿಗೆ ಮದುವೆ ನಿಶ್ಚಯವಾಗಿರುತ್ತೆ. ವರದಮ್ಮ ತಮ್ಮ ಗಂಡನಾಗುವವನ್ನು ನೋಡಿರಲೂ ಇಲ್ಲ ಮಾತಾಡಿರಲೂ ಇಲ್ಲ. ಆದರೆ ಒಂದು ಅಪಘಾತದಲ್ಲಿ ಆ ಹುಡುಗ ಸತ್ತುಹೋಗುತ್ತಾನೆ. ಮದುವೆಯಾಗಿದ್ದರೆ ವರದಮ್ಮ ವಿಧವೆಯಾಗಬೇಕಿತ್ತು. ಆದರೆ ವರದಮ್ಮ ದೈಹಿಕವಾಗಿಯಲ್ಲದಿದ್ದರೂ ಮಾನಸಿಕವಾಗಿ ಮದುವೆಯಾಗಿದ್ದರು. ಆ ಹಠದಿಂದ ತಮಗೆ ತಾವೇ ವಿಧವೆ ಪಟ್ಟ ತಂದುಕೊಂಡರು. ಯಾರು ಏನೇ ಹೇಳಿದರೂ ಅವರ ಮನಸ್ಸು ಮತ್ತೆ ಮದುವೆ ಕಡೆಗೆ ಹೊರಳಲೇ ಇಲ್ಲ. ಬದುಕಿನಲ್ಲಿ ಕೆಲವೊಮ್ಮೆ ಇಂಥಾ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಅಂತ ಹೇಳಿದರು ವಿನತೆ ಗೊಂದಲದಲ್ಲಿ ಇದ್ದಳೇ ಹೊರತು ಮನಸ್ಸು ಪಕ್ವವಾಗಿರಲಿಲ್ಲ.

ಎಂದಿನಂತೆ ವಿನತೆಯ ತಾಯಿ ಅವಳ ಮೇಲೆ ಕಾವಲು ಇಟ್ಟಿದ್ದರು. ಆದರೆ ವರದಮ್ಮನವರ ಸಲಹೆ ಕೇಳಿ ವಿನತೆ ಗಟ್ಟಿ ನಿರ್ಧಾರ ತೆಗೆದುಕೊಂಡ ದಿನ ಮನೆಯಲ್ಲಿ ದೊಡ್ಡ ರಾಮಾಯಣವೇ ನಡೆದು ತಾಯಿ ಅತ್ತು ಕರೆದು, ಪ್ರಜ್ಞೆ ಕಳೆದುಕೊಂಡು ಎಲ್ಲರಿಗೂ ಗಾಬರಿಹುಟ್ಟಿಸಿ ಕೊನೆಗೂ ವಿನತೆ ಅಮ್ಮ ನಾನು ನಿನ್ನ ಮಾತು ಮೀರೋದಿಲ್ಲ ಒಟ್ಟಿನಲ್ಲಿ ನಿನ್ನ ಮಗಳ ಹಣೆಯಬರಹ ನಿನ್ನಿಂದಲೇ ಹಾಳಾಗಿಹೋಯಿತು ಅಂತ ದು:ಖ ತೋಡಿಕೊಂಡಳು.

ಮುಂದಿನ ಪುಟ ನೋಡಿ ...

ಅಲ್ಲಿಗೆ ವಿನತೆಯ ಮನೆಯ ಸಮಸ್ಯೆಯಿಂದಾಗಿ ಅವಳ ವೈವಾಹಿಕ ಜೀವನಕ್ಕೆ ಆರಂಭವೇ ದೊರೆಯಲಿಲ್ಲ. ವಿನತೆ ನಮ್ಮ ಜಾತಿಯಲ್ಲದ ಹುಡುಗನನ್ನು ಮದುವೆಯಾಗೋದನ್ನು ತಾಯಿ ಸಮರ್ಥವಾಗಿ ತಡೆದರು.

ಮುಂದೆ ಒಂದು ಅನಿರೀಕ್ಷಿತ ಪ್ರಸಂಗದಲ್ಲಿ ವಿನತೆಯ ಅಕ್ಕ ವಿಜಯಕುಮಾರಿಯ ಹಿಂದಿನ ಪ್ರಣಯ ಪ್ರಸಂಗ - ಅವಳೂ ವಿನತೆಯಂತೆಯೇ ರಾಮಮೂರ್ತಿ ಎನ್ನುವವರನ್ನು ಪ್ರೀತಿಸಿ ಒಂದು ದಿನ ದೇಹಸಂಬಂಧವನ್ನೂ ಹೊಂದಿ ನಂತರ ತಾಯಿ ರಾಮಮೂರ್ತಿಯ ಸ್ಥಿತಿಗತಿಯ ಬಗ್ಗೆ ಬಾಯಿಗೆ ಬಂದ ಹಾಗೆ ಅವಮಾನ ಮಾಡಿದ್ದರಿಂದ, ಮತ್ತು ವಿಜಯಕುಮಾರಿ ತಾನು ತಾಯಿಯ ವಿರುದ್ಧ ನಿಲ್ಲಲಾರೆ ಅಂತ ರಾಮಮೂರ್ತಿಯ ಪ್ರೀತಿಗೆ ಗುಡ್ ಬೈ ಹೇಳಿದ್ದಳು. ಇದು ತಿಳಿದ ಆನಂದ ಅಕ್ಕ ತಂಗಿಯರ ಬದುಕಿನಲ್ಲಿ ಇದೆಂಥಾ ಎಕತಾನತೆ ಅಂತ ಅಚ್ಚರಿಹೊಂದಿದ್ದ. ತಾನು ವಿನತೆಯನ್ನು ಸಂಪರ್ಕಿಸುವುದು, ಅವಳು ತನ್ನನ್ನು ಸಂಪರ್ಕಿಸುವುದು ಸಾಧ್ಯವಾಗದೇ ಹೋದಂಥ ದಿನಗಳಲ್ಲಿ ಆನಂದನಿಗೆ ಧಾರವಾಡದಲ್ಲಿ ಕೆಲಸ ಸಿಕ್ಕಿ ಅವನು ಅಲ್ಲಿಗೆ ತಾಯಿಯನ್ನು ಕರೆದುಕೊಂಡು ಹೋದ. ಅಲ್ಲಿ ಅವನ ತಾಯಿಯ ದಿನಚರಿಯನ್ನು ತಾನೇ ಬದಲು ಮಾಡಿದ. ಅಲ್ಲಿಯವರೆಗೂ ತಾಯಿ ಹಪ್ಪಳ ಸಂಡಿಗೆ ಮಾಡಿ ದೇಹ ದಂಡಿಸುತ್ತಿದ್ದುದನ್ನು ತಪ್ಪಿಸಿ ಇನ್ನು ಮೇಲೆ ನೀನು ಮನೇಲೇ ಆರಾಮವಾಗಿ ಇದ್ದು ಸಂಜೆ ಪುರಾಣ ಪ್ರವಚನ ಕೇಳಿಕೊಂಡಿರು ಅಂದಿದ್ದ. ಮುಂದೆ ತಾಯಿಯ ಬಲವಂತದಿಂದಾಗಿ ಅರಕಲಗೂಡಿನ ಸೀತಾಲಕ್ಷ್ಮಿ ಜೊತೆ ಆನಂದನ ಮದುವೆ ನಡೆದೇ ಹೋಯಿತು. ಅಲ್ಲಿಗೆ ತಾಯಿಯ ಹಠದಿಂದಾಗಿ ವಿನತೆ ಒಂಟಿಯಾಗೇ ಉಳಿದಳು.

ಹಿಂದೊಮ್ಮೆ ತನ್ನನ್ನೇ ಮದುವೆಯಾಗುತ್ತೀನಿ ಅಂತ ಹಠ ಹಿಡಿದಿದ್ದ ರಮ ಮತ್ತು ಅವಳನ್ನು ಆನಂದ ತಿರಸ್ಕರಿಸಿದ್ದು ನೆನಪಿಗೆ ಬಂದಾಗ ರಮ ತನ್ನ ಬಾಳಿನಲ್ಲಿ ಮದುವೆಯಾದವನೊಬ್ಬನಿಗೆ ಅವಕಾಶ ಕೊಟ್ಟು ತನ್ನ ಕನ್ಯತ್ವವನ್ನೂ ಕಳೆದುಕೊಂಡು ಅವನಿಗೆ ಹಣವನ್ನೂ ಕೊಟ್ಟು ಅವನೊಂದಿಗೆ ಮದುವೆಯಾಗುವ ಕನಸು ಕಾಣುತ್ತಿದ್ದವಳಿಗೆ ಆಘಾತ ಉಂಟಾಗಿ ಆ ಮನುಷ್ಯ ಢೋಂಗಿ ಅಂತ ತಿಳಿದು ಮನಸ್ಸು ಕೆಟ್ಟು ಹೋಗಿ ಈ ಪರಿಸರವೇ ಬೇಡ ಅಂತ ದೂರದ ಜೋದ್‌ಪುರಕ್ಕೆ ಹೊರಟಿದ್ದವಳು ಅನಿರೀಕ್ಷಿತವಾಗಿ ಆನಂದನನ್ನು ಭೇಟಿಯಾಗಿ ಅವರ ಮನೆಯಲ್ಲಿ ಒಂದು ದಿನ ಇದ್ದು ಹೋದಳು. ನಮ್ಮೆಲ್ಲರ ಬಾಳಿನಲ್ಲೂ ಪ್ರೀತಿ ಎನ್ನುವುದು ಹೀಗೇಕೆ ಆಟವಾಡಿದೆ ಅಂತ ಆನಂದನಿಗೆ ಅರ್ಥವಾಗಿಲ್ಲ. ಇವೆಲ್ಲವುಗಳಿಗೆ ಕಾರಣ ವಿನತೆಯ ತಾಯಿ ತನ್ನ ಕೌಟುಂಬಿಕ ಸ್ಥಿತಿಗತಿಗಳಿಗೆ ಕೊಟ್ಟ ಮಹತ್ವ. ಇಬ್ಬರು ಹೆಣ್ಣುಮಕ್ಕಳೂ ಮದುವೆಗೆ ಮುಂಚೆಯೇ ತಾವು ಇಷ್ಟಪಟ್ಟವರೊಂದಿಗೆ ದೈಹಿಕ ಸಂಬಂಧ ಹೊಂದಿದ್ದರು ಎನ್ನುವ ಸತ್ಯ ಮಾತ್ರ ಆಕೆಗೆ ಗೊತ್ತಿಲ್ಲ. ಹೆಣ್ಣುಮಕ್ಕಳೂ ಅಷ್ಟೆ ತಮ್ಮ ಆಸೆಯನ್ನು ತಾಯಿಯ ಆಸೆಯ ವಿರುದ್ಧ ಅದುಮಿ ಇಟ್ಟು ನೋವು ಅನುಭವಿಸಿದವರು. ವಿಜಯಕುಮಾರಿಯಾದರೂ ಮದುವೆಯಾಗಿ ಮಗು ಹೆತ್ತು ಸಂಸಾರ ಸುಖ ಅನುಭವಿಸಿದಳು. ಆದರೆ ವಿನತೆಗೆ ಆ ಯೋಗ ಇರಲಿಲ್ಲ. ಇತ್ತ ಆನಂದ ತನ್ನ ಕೌಟುಂಬಿಕ ವಿಚಾರಗಳಿಗೆ ಬೆಲೆ ಕೊಟ್ಟಿದ್ದನಾದರೂ ಅಷ್ಟಿಷ್ಟು ಬದಲಾಗಿ ತಾಯಿಯನ್ನೂ ಒಪ್ಪಿಸುವ ಧೈರ್ಯ ಮಾಡಿದ್ದ. ಆದರೆ ವಿನತೆಯಿಂದ ಸಿಗಬೇಕಾದ ಬೆಂಬಲ ಸಿಕ್ಕಿರಲಿಲ್ಲ. ಹೀಗಾಗಿ ತಾಯಿ ಮದುವೆ ಪ್ರಸ್ತಾಪ ತೆಗೆದಾಗ ಅದರ ಬಗೆಗೆ ನಿರ್ಧಾರ ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರವನ್ನು ತಾಯಿಗೇ ಕೊಟ್ಟು ಸೀತಾಲಕ್ಷ್ಮಿಯನ್ನು ಪತ್ನಿಯಾಗಿ ಸ್ವೀಕರಿಸಿ ತಂದೆಯೂ ಆದ.

ಬದುಕಿನಲ್ಲಿ ತೀರಾ ಹತಾಶಳಾದ ವಿನತೆ ಒಂದು ದಿನ ಆನಂದನನ್ನು ತನ್ನ ಮನೆಯ ಬಾಗಿಲಿನಲ್ಲಿ ಕಂಡಾಗ ಆದ ಸಂತೋಷ, ಆಶ್ಚರ್ಯ ಅಷ್ಟಿಷ್ಟಲ್ಲ. ಅವಳೊಂದಿಗೆ ತುಂಬಾ ಮಾತಾಡಬೇಕೆಂದು ಸಾಧ್ಯವಾದರೆ ಅವಳ ಬದುಕನ್ನು ಸರಿಮಾಡಬೇಕೆಂದು ಆನಂದ ಬಂದಿದ್ದ. ಅವರಿಬ್ಬರೂ ಪತಿ ಪತ್ನಿಯರಂತೆಯೇ ನಾಲ್ಕಾರು ದಿನ ಕಳೆದರು. ತನ್ನ ಬತ್ತಿದ ಆಸೆಗೆ ಮತ್ತೆ ನೀರೆರೆಯುವ ಪ್ರಯತ್ನದಲ್ಲಿ ವಿನತೆ ಈಗ ನಾನು ಎಲ್ಲವನ್ನೂ ಎಲ್ಲರನ್ನೂ ಗೆದ್ದಿದ್ದೇನೆ. ನನ್ನ ಜವಾಬ್ದಾರಿ ಕಳೆದಿದೆ. ನನ್ನ ಬದುಕಿನ ನಿರ್ಧಾರ ತೆಗೆದುಕೊಳ್ಳುವ ಹಕ್ಕು ನನಗಿದೆ. ಈಗ ನಾವಿಬ್ಬರೂ ಮದುವೆಯಾಗಬಹುದು ಎನ್ನುತ್ತಾಳೆ. ಏನೂ ಪಾಪ ಮಾಡದ ಸೀತಾಲಕ್ಷ್ಮಿಗೆ ದ್ರೋಹ ಮಾಡುವ ಮನಸ್ಸು ಆನಂದನಿಗಿಲ್ಲ. ಆದರೆ ವಿನತೆ ಅವಳನ್ನು ನನ್ನ ತಂಗಿಯಂತೆ ನೋಡಿಕೊಳ್ಳುತ್ತೇನೆ, ಮೂವರೂ ಕೂಡಿ ಸಂತೋಷವಾಗಿರೋಣ ಎನ್ನುವ ಆಸೆ, ಭರವಸೆ ಹುಟ್ಟಿಸಿದ್ದರಿಂದ ಆನಂದ ಮುಂದುವರಿದರೂ ಇದರಿಂದ ತೊಂದರೆಯಾಗಬಹುದೇ ಅಂತ ಲಾಯರನ್ನು ಕೇಳಲಾಗಿ ಅವರು ಮೊದಲನೆ ಹೆಂಡತಿ ಬದುಕಿರುವಾಗ ಇನ್ನೊಬ್ಬಳನ್ನು ಮದುವೆಯಾಗುವುದು ಕಾನೂನಿನ ಪ್ರಕಾರ ಅಪರಾಧ ಏನು ಬೇಕಾದರೂ ಆಗಬಹುದು ಎನ್ನುತ್ತಾರೆ. ಅಲ್ಲಿಗೆ ಅವರಿಬ್ಬರ ಆಸೆಗೆ ತಣ್ಣೀರು ಎರಚಿದಂತಾಗುತ್ತದೆ. ಒಲ್ಲದ ಮನಸ್ಸಿನಿಂದ ಆನಂದನನ್ನು ಕಳಿಸಿಕೊಡುತ್ತಾಳೆ. ಅದೇ ಅವರಿಬ್ಬರ ಕಡೇ ಭೇಟಿ.

ಮುಂದೆ ವಿನತೆ ತಿರಮಕೂಡಲು ನರಸೀಪುರಕ್ಕೆ ಹೋಗುತ್ತಾಳೆ. ಒಂಟಿ ಬದುಕು ಸಾಗಿಸುತ್ತಾಳೆ. ಜ್ವರ ಅಂತ ಬಂದಿದ್ದು ಟೈಫಾಯಿಡ್‌ಗೆ ತಿರುಗುತ್ತದೆ. ಸ್ನೇಹಿತೆ ಜಗದಾಂಬ ಮುಖಾಂತರ ವಿಷಯ ತಿಳಿದ ತಾಯಿ ಬರುತ್ತಾಳೆ. ಎಲ್ಲರೂ ಇರುವಾಗ ವಿನತೆ ಪ್ರಾಣ ಹಾರಿಹೋಗುತ್ತದೆ. ಆನಂದನಿಗೆ ತುಸು ತಡವಾಗಿ ವಿಚಾರ ತಿಳಿದಾಗ ನಿರಾಸೆ ಹೊಂದುತ್ತಾನೆ.

ಇಡೀ ಕಾದಂಬರಿಯಲ್ಲಿ ಕೌಟುಂಬಿಕ ಸಂಘರ್ಷ ನಡೆಯುವುದು ವಿನತೆಯ ಮನೆಯಲ್ಲಿ ಮಾತ್ರ. ವಿಜಯಕುಮಾರಿಯ ಮದುವೆಯಾಗುವ ಸಂದರ್ಭದಲ್ಲಿ ವಾಸನ್ ಮನೆಯವರು ಕೇಳಿದ ವರೋಪಚಾರ ಉಡುಗೊರೆ ವಿಚಾರದಲ್ಲಿ ತುಸು ಗೊಂದಲವಾಗುತ್ತದೆ. ಉಳಿದಂತೆ ಆನಂದನ ಮನೆಯಲ್ಲಿ ಯಾವ ಸಂಘರ್ಷವೂ ಇಲ್ಲ. ತಾಯಿ ಮಗ ಹೊಂದಿಕೊಂಡಿದ್ದಾರೆ.

ತಾಯಿಯಂತೆ ಮಗ, ಮಗನಂತೆ ತಾಯಿ. ತಾಯಿಯ ವಿರುದ್ಧ ನಿರ್ಧಾರ ತೆಗೆದುಕೊಳ್ಳಲು ಆನಂದ ತಯಾರಾಗಿದ್ದರೂ ಅಂಥಾ ಸಂದರ್ಭ ಬರೋದೇ ಇಲ್ಲ. ವಿನತೆ ಆನಂದನನ್ನು ಮಾನಸಿಕವಾಗಿ ಗಂಡ ಎಂದೇ ತಿಳಿದಿರುತ್ತಾಳೆ. ಅದರಂತೆ ನಡೆದುಕೊಂಡೂ ಇರುತ್ತಾಳೆ. ಕುಟುಂಬ ವ್ಯವಹಾರ ಅಂದರೆ ಅಲ್ಲಿ ಹೆಣ್ಣುಮಕ್ಕಳ ಮದುವೆಯದೇ ಒಂದು ಸಮಸ್ಯೆಯಾಗುವುದಿಲ್ಲ. ಇಲ್ಲಿ ವಿನತೆಯ ತಮ್ಮಂದಿರ ಬದುಕು ಅವಳ ಆಸೆಗೆ ಮೊಟುಕಾಗುತ್ತದೆ. ವಿನತೆ ಆನಂದನನ್ನು ಮದುವೆಯಾದರೆ ಅವಳಿಂದ ಯಾವ ಸಹಾಯವನ್ನೂ ಪಡೆಯುವುದಿಲ್ಲ ಅಂತ ತಾಯಿ ಹೆದರಿಸಿದಾಗ ತಮ್ಮಂದಿರ ಬದುಕು ಮೂರಾಬಟ್ಟೆಯಾಗುತ್ತದೆ ಎಂದು ಹೆದರಿದ ವಿನತೆ ಇಟ್ಟ ಹೆಜ್ಜೆಯನ್ನು ಹಿಂದೆಗೆಯುತ್ತಾಳೆ.

ಮುಂದಿನ ಪುಟ ನೋಡಿ ...

ತಮ್ಮಂದಿರಿಗಾಗಿ, ಕುಟುಂಬ ಸೌಖ್ಯಕ್ಕಾಗಿ ತನ್ನ ಸುಖವನ್ನು ತ್ಯಾಗ ಮಾಡುತ್ತಾಳೆ. ಅಲ್ಲಿಗೆ ಮನೆ ಒಡೆಯುವುದು ತಪ್ಪುತ್ತದೆ.

ಒಟ್ಟಿನಲ್ಲಿ 1962ರಲ್ಲಿ ದೂರ ಸರಿದರು ಪ್ರಕಟವಾಗಿದ್ದರೂ ಇಂದಿಗೂ ಕೆಲ ಅಂಶಗಳು ಪ್ರಸ್ತುತತೆಯ ಹಂದರದಲ್ಲಿವೆ. ಇಂದಿನ ಹೆಣ್ಣು ಮಕ್ಕಳು ವಿಜಯಕುಮಾರಿ ವಿನತೆಯರಂತೆ ಇರೋಲ್ಲ. ತಮಗೆ ತಮ್ಮ ಪ್ರೀತಿ ಸಿಕ್ಕರೆ ಸಾಕು ಅಲ್ಲಿ ಜಾತಿ ಪ್ರೆಶ್ನೆ ಬರೋದೇ ಇಲ್ಲ. ಎಲ್ಲರೂ ಅವರವರ ಕಾಲ ಮೇಲೆ ಅವರವರು ನಿಲ್ಲಬೇಕು, ಒಮ್ಮೆ ಮದುವೆ ಆಗಿಬಿಟ್ಟರೆ ತಂದೆ ತಾಯಿಯರು ಹೇಗಾದರೂ ಒಪ್ಪುತ್ತಾರೆ ಎನ್ನುವ ಭಾವನೆ ಈಗಿನ ಕಾಲದ ಹುಡುಗಿಯರದ್ದು. ಹೀಗಾಗಿ ಇಂದಿನ ದಿನಗಳಲ್ಲಿ ವಿನತೆಯಂಥವರು ಅಪರೂಪ.

ಕಾದಂಬರಿ ಓದುವಾಗ ನಾವು ಅನೇಕ ಕುಟುಂಬಗಳ ಒಳನೋಟಗಳನ್ನು, ಅಲ್ಲಿನ ಸೂಕ್ಷ್ಮತೆಗಳನ್ನು ಕಾಣಬಹುದು. ಕಾದಂಬರಿಯ ಓಘದಿಂದಾಗಿ ಇಲ್ಲಿನ ಅನೇಕ ಘಟನೆಗಳು ನಮ್ಮ ನಡುವೆಯೇ ನಡೆಯುತ್ತಿವೆಯೇನೋ ಎನ್ನುವಷ್ಟು ಹತ್ತಿರವಾಗಿವೆ. ಹಾಗೆ ನೋಡಿದರೆ ಒಂದು ಕುಟುಂಬ ಇದ್ದಂತೆ ಇನ್ನೊಂದು ಕುಟುಂಬ ಇಲ್ಲ. ಎಲ್ಲವೂ ಬೇರೆ ಬೇರೆ. ಹೀಗಾಗಿ ದೂರ ಸರಿದರು ಕಾದಂಬರಿಯಲ್ಲಿನ ಕೌಟುಂಬಿಕ ಸಮಸ್ಯೆಗಳನ್ನು ಕೇವಲ ವಿನತೆ ಆನಂದರ ಮೂಲಕ ನೋಡುವ ಒಂದು ಪ್ರಯತ್ನ ಇದು. ಇಡೀ ಕಾದಂಬರಿಯಲ್ಲಿನ ಪಾತ್ರ ಸಂಘರ್ಷಗಳ ಮೂಲಕ ಈ ಮೌಲ್ಯಗಳನ್ನು ಅವಲೋಕಿಸಿದರೆ ಬಹುಶ: ಅದೇ ಒಂದು ಮಿನಿ ಕಾದಂಬರಿ ಗಾತ್ರದಷ್ಟಾಗಬಹುದು. ▪

ಚಿಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ

HTTP://WWW.SUGAMAKANNADA.COM/

ವಿಚಾರ ವಿಹಾರ

ಮಾಲು, ಅಡಿಲೈಡ್

ನಾಲ್ಕು ಜಾತಿಗಳು

ಶ್ರೀಮತ್ ಭಗವತ್ ಗೀತೆಯನ್ನು, ಶ್ರೀ ಸತ್ಯ ಸಾಯಿಬಾಬಾರವರು ಬೆಂಕಿ ಪೊಟ್ಟಣಕ್ಕೆ ಹೋಲಿಸಿ, ಅದರಲ್ಲಿನ ಯಾವುದೇ ಕಡ್ಡಿಯನ್ನು ಗೀರಿದರು ಹೇಗೆ ಬೆಂಕಿ ಉತ್ಪತ್ತಿಯಾಗಿ ಬೆಳಕು ಚೆಲ್ಲುತ್ತದೋ, ಹಾಗೆಯೇ ಗೀತೆಯ ಯಾವುದೇ ಶ್ಲೋಕವನ್ನು ಅರ್ಥೈಸಿಕೊಂಡು ಅಳವಡಿಸಿಕೊಂಡಲ್ಲಿ ನಮ್ಮ ಜೀವನ ಬೆಳಗುತ್ತದೆ ಎಂದಿದ್ದರು.

ಶ್ರೀ ಜೆ.ಪಿ.ರಾಜರತ್ನಂರವರ 'ವಿಚಾರ ರಶ್ಮಿ'ಯೂ ಹಾಗೆಯೆ. ಅದರಲ್ಲಿನ ಯಾವುದೇ 'ರಶ್ಮಿ' ಯನ್ನು ಓದಿ ಅರ್ಥೈಸಿಕೊಂಡಲ್ಲಿ ನಮ್ಮ ಹೃದಯದಲ್ಲಿ ಬೆಳಕು ಮೂಡಿದ ಅನುಭವವಾಗುತ್ತದೆ.

ಈ ಕೆಳಗಿನ ವಿಚಾರ ಅವರ ಹಲವು 'ರಶ್ಮಿ' ಗಳಲ್ಲಿ ಒಂದು.

ಜಾತೀಯ ವಾದ ಸನಾತನ, ಅದು ಬಾಹ್ಯ. ಬುದ್ಧ ಗುರು ಹೇಳಿದ ಜಾತಿಗಳು ಲೋಕದ ಜನರ ಗುಣ ಕರ್ಮಗಳಿಗೆ ಸಂಬಂಧ ಪಟ್ಟದ್ದು. ಆ ನಾಕು ಜಾತಿಯ ವಿಧಗಳು:

೧. ಕತ್ತಲೆಯಿಂದ ಕತ್ತಲೆಗೆ ಹೋಗುವವರು

ಬಡವರಾಗಿ ಹುಟ್ಟಿರುತ್ತಾರೆ. ಆರೋಗ್ಯವಿರುವುದಿಲ್ಲ, ಜೀವನಕ್ಕೆ ಬೇಕಾದ ಅವಶ್ಯಕತೆ ಅನುಕೂಲಗಳಿಂದ ವಂಚಿತರಾಗಿರುತ್ತಾರೆ. ಅವಿದ್ಯಾವಂತರು,ಒಳ್ಳೆಯ ನಡತೆಯಲ್ಲಿ ನಂಬಿಕೆಯಿರುವುದಿಲ್ಲ, ಸಮಾಜದ ಮೇಲೆ ರೋಷ. ಸುಳ್ಳು ಹೇಳುವುದು, ಕಳ್ಳತನ, ಕುಡಿತ, ಜೂಜು ಮತ್ತು ಇತರ ಆಕೃತ್ಯಗಳನ್ನು ಲೆಕ್ಕವಿಲ್ಲದಷ್ಟು ಮಾಡುತ್ತಾರೆ. ಈ ಕ್ರಿಯೆಗಳಿಂದ ತಮಗೆ ಮತ್ತು ಸಮಾಜದ ಮೇಲೆ ಏನು ಪರಿಣಾಮ ಆಗುತ್ತದೆ ಎಂದು ಅರ್ಥೈಸಿಕೊಳ್ಳಲು ವಿಫಲರಾಗಿರುತ್ತಾರೆ. ಇವರು ಕತ್ತಲೆಯಿಂದ ಕತ್ತಲೆಗೆ ಹೋಗುವವರು

೨. ಕತ್ತಲೆಯಿಂದ ಬೆಳಕಿಗೆ ಹೋಗುವವರು

ಈ ಮೇಲಿನ ವರ್ಗದವರಂತೆ ಹೀನರಾಗಿ ಹುಟ್ಟಿ, ಹೀನರಾಗಿ ಬದುಕಿದವರು. ಆದರೆ, ಇವರಲ್ಲಿ ಕೆಲವರಿಗೆ ಧರ್ಮದಲ್ಲಿ ನಂಬಿಕೆ, ಕೆಟ್ಟ ಯೋಚನೆ, ಕೆಟ್ಟ ಕೆಲಸ, ಕೆಟ್ಟ ಮಾತು ಆಡದೆ ಒಳ್ಳೆಯದನ್ನು ಮಾಡಲು ಪ್ರಯತ್ನಿಸಿ ತಮ್ಮನ್ನು ಉದ್ಧರಿಸಿಕೊಳ್ಳುತ್ತಾರೆ. ಇವರು ಕತ್ತಲೆಯಿಂದ ಬೆಳಕಿಗೆ ಹೋಗುವವರು.

೩. ಬೆಳಕಿನಿಂದ ಕತ್ತಲೆಗೆ ಹೋಗುವವರು

ಈ ಕೆಲವರು ಅದೃಷ್ಟವಂತರು. ಇವರಿಗೆ ಆರೋಗ್ಯ, ವಿದ್ಯೆ, ಐಶ್ವರ್ಯ, ಸ್ಥಿತಿ ಗತಿ ಚೆನ್ನಾಗಿದೆ. ಅದರಿಂದ ಮದ ಬಂದಿದೆ. ಮತ್ತಷ್ಟು ಧನಧಾಹಿಗಳು, ಅಹಂಕಾರಿಗಳು. ತಾವಾಯಿತು, ತಮ್ಮ ಭೋಗವಾಯಿತು ಎಂದು ಸ್ವಾರ್ಥ ಜೀವನ ನಡೆಸುವುದರಲ್ಲಿ ಮಗ್ನರಾಗಿರುತ್ತಾರೆ, ಇವರಿಗೆ ದಯ, ಅನುಕಂಪ, ಸಹಾನುಭೂತಿಗಳಲ್ಲಿ ನಂಬಿಕೆ ಇಲ್ಲ. ಇವರು ಬೆಳಕಿನಿಂದ ಕತ್ತಲೆಗೆ ಹೋಗುವವರು.

೪. ಬೆಳಕಿನಿಂದ ಬೆಳಕಿಗೆ ಹೋಗುವವರು

ಸಮಾಜದಲ್ಲಿ ಇವರು ಅದೃಷ್ಟವಂತರು, ಈ ಜನಗಳಿಗೆ ಭಾಗ್ಯವಂತರು ಎಂದು ಹೇಳುವ ಎಲ್ಲವೂ ದೊರಕಿದೆ. ಇವರು ತಾವು ಪಡೆದ ಮತ್ತು ಬಂದ ಭಾಗ್ಯವನ್ನು ಅತಿಮಾಡದೆ, ದಯೆಯಿಂದ ದಾನ ಮಾಡುತ್ತಾ, ಸಹ ಜೀವಿಗಳಿಗೆ ಸಹಾಯ ಮಾಡುತ್ತಾ, ಧರ್ಮಕ್ಕೆ ವಿರೋಧವಾಗಿ ಕಾರ್ಯಗಳನ್ನು ಮಾಡದೆ ಸಂಯಮದಿಂದ ಬದುಕುತ್ತಾರೆ. ತಾವು ಉದ್ಧಾರವಾಗಿ ಇತರರನ್ನು ಉದ್ಧರಿಸುತ್ತಾರೆ. ಇವರು ಬೆಳಕಿನಿಂದ ಬೆಳಕಿಗೆ ಹೋಗುವ ನಾಲ್ಕನೇ ವರ್ಗದ ಜಾತಿ. ಇವರೇ ಪುರುಷೋತ್ತಮರು ಎಂದಿದ್ದಾನೆ ಬುದ್ಧ ಗುರು.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ವರಪರೀಕ್ಷೆ

ಇವತ್ತು ಬೆಳಗ್ಗೆ ಸುಬ್ಬಣ್ಣ ಸಿಕ್ಕ. "ಮನೆಗೆ ಬಾರೋ" ಅಂದ. ನನ್ನ ಹೆಂಡತಿಯೊಡನೆ ಆಗತಾನೇ ಫ್ರೆಷ್ ಆಗಿ ಜಗಳ ಆಡಿದ್ದೆ. ರಾಜಿಯ ಗಾಳಿ ಬೀಸಿ ಪರಿಸ್ಥಿತಿ ತಣ್ಣಗಾಗಲು ಸಿಕ್ಸ್ಸ್ ಅವರ್ಸ್ ಬಾಕಿ ಇತ್ತು. ತಿಂಡಿಯ ಬಾಬತ್ತಾದರೂ ಕಳೆಯಲೆಂದು ಬಸವನ ಹಿಂದೆ ಬಾಲವಾದೆ.

ಸುಬ್ಬಣ್ಣನ ಮನೆಯ ಮುಂದೆ ಅನುರೂಪ ಪೇರ್ಸ್ & ರೀಪೇರ್ಸ್ ಎಂಬ ಬೋರ್ಡ್ ನೇತಾಡುತ್ತಿತ್ತು.

ನಾನು ? ಆಕಾರದಲ್ಲಿ ನಿಂತೆ.

"ಫ್ರೆಷ್ ಆಗಿ, ಫಾರ್ ದ ಫಸ್ಟ್ ಟೈಮ್ ಮದುವೆ ಆಗೋವ್ರು ಪೇರ್ಸ್" ಸುಬ್ಬಣ್ಣ ಉವಾಚ.

"ಸರಿ. ಈ ರಿಪೇರಿ ಕೆಲಸ ಏನು?"

"ಅದು ರಿಪೇರಿ ಅಲ್ಲ, re-pair ಅಂತ;ಅಂದರೆ ಮರುಜೋಡಣೆ, ಮರುಮದುವೆ"

? ಆಕಾರದಿಂದ ಭೂಮಿಗೆ ಲಂಬರೇಖೆಯಲ್ಲಿ ಕುಳಿತುಕೊಳ್ಳುವ ಭಂಗಿಗೆ ಬದಲಾದೆ. ತಿಂಡಿ ಬಂತು. ರಬ್ಬರ್ ನಂತಹ ಇಡ್ಲಿ ಬಿಸಿಬಿಸಿ ಸಾಂಬಾರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿತ್ತು. ಸ್ಪೂನಿನಿಂದ ಅದರ ಅವಶೇಷವನ್ನು ತೆಗೆಯುವ ಪ್ರಯತ್ನ ಮಾಡಿದೆ. ಮೂರು ಇಂಚ್ ಸುತ್ತಳತೆ ಇದ್ದ ಇಡ್ಲಿ ನಾಲ್ಕು ಇಂಚಿಗೆ ವಿಸ್ತಾರವಾಯಿತು. ಸ್ಪೂನ್ ಬೆಂಡಾಯಿತು.

ನನ್ನ ಹೆಂಡತಿಯ ಪಾಕಪ್ರಾವೀಣ್ಯ ಕಣ್ಣುಮುಂದೆ ಬಂದು "ಛೆ! ಜಗಳವಾಡಿ ತಪ್ಪು ಮಾಡಿದೆ" ಎನ್ನಿಸಿತು. ಬಾಗಿಲ ಬಳಿ ನೆರಳಾಡಿತು. "ರಾಯರೇ..." ಎಂದಿತೊಂದು ಅಪ್ಲಿಕೇಷನ್ ಹಾಕುವವರಿಗೆ ಇರುವಂತಹ ದನಿ.

"ಬನ್ನಿ ರಾಮಣ್ಣ, ಹುಡುಗಿಯ ಕಡೆಯವರೂ ಇನ್ನೇನು ಬಂದ್ಬಿಡ್ತಾರೆ" ಎಂದ ಸುಬ್ಬಣ್ಣ ಅವರ ಮುಂದೆ ತಿಂಡಿ ತಿನ್ನುವುದು ಬೇಡವೆಂದು ರಬ್ಬರಿಡ್ಲಿಯ ಪ್ಲೇಟನ್ನು ಒಳಗೊಯ್ದ. ನನ್ನ ಉದರ ಸಂತಸದಿಂದ ಕುಣಿಯಿತು.

ಹುಡುಗ, ಹುಡುಗಿಯರಿಬ್ಬರ ಮನೆಯವರೂ ಬಂದರು.

"ಹುಡುಗ ಬುದ್ಧಿವಂತ. ಪದವೀಧರ" ವ.ಪಿ. ಉವಾಚ

"ಎಷ್ಟು?" ಎಂದ ಕ.ಪಿ.

"ಏನು ಎಷ್ಟು?"

"ಪದವಿ ದರ ಅಂದ್ರಲ್ಲಾ, ಆ ಪದವಿ ಪಡೆಯಕ್ಕೆ ಎಷ್ಟು ಫೀಸು, ಡೊನೇಷನ್ನು, ಇತ್ಯಾದಿ? in short, ದರ ಎಷ್ಟು?"

"Be quiet daddy. ನಾನು ಪ್ರಶ್ನೆಗಳನ್ನ ಕೇಳ್ತೀನಿ" ಎಂದಳು ಕನ್ಯಾಮಣಿ.

ಆಹಾ! ಎಂತಹ ರೂಪಸಿ ಅವಳು!

ಟಾರಿನಲ್ಲಿ ಅದ್ದಿರುವ ಗೋಣಿದಾರದಂತಹ ಕೂದಲು. ಮ್ಯಾಗ್ನೆಟ್ಟನ್ನು ಬಾಯಿಯ ಬಳಿ ತಂದರೆ ಛಕ್ಕನೆ ಅಂಟಿಕೊಂಡುಬಿಡುವಂತಹ ಕಬ್ಬಿಣ ಬಳಸಿ ನೇರವಾಗಿಸಲ್ಪಟ್ಟ ದಂತಪಂಕ್ತಿ. ಜಯಲಲಿತೆಯ ತೂಕ, ಮಾಯಾವತಿಯ ಮುಖ, ದನಿಯೋ ಸುನಾಮಿಕಾಲದ ಮೇಘನಾದ!

"What do you do?"

"Whatever you say madam"

ಮೊದಲ ಸುತ್ತಿನ ಮಾತುಕತೆಯಲ್ಲೇ ಎದುರಾಳಿಗಳ ಬಲಾಬಲ ನಿರ್ಧಾರವಾಗಿಹೋಗಿತ್ತು.

"ಹುಡುಗಿ ಏನು ಓದಿರುವುದು?"

"ಸಿವಿಲ್ ಎಂಜಿಜಿಯರಿಂಗ್" ಎಂದೆ ನಾನು.

"ನಿನಗೆ ಹೇಗಯ್ಯಾ ಗೊತ್ತು?" ಹುಬ್ಬೇರಿಸಿದ ಸುಬ್ಬ.

"ತಲೆಯಲ್ಲಿ ಟಾರು, ಬಾಯಲ್ಲಿ ಕಬ್ಬಿಣ, ಸಿಮೆಂಟ್..."

"ಸಿಮೆಂಟ್?"

"ಹೌದು. ಮೇಲಿನ ಬಲದವಡೆಯಿಂದ ಮೂರನೆಯ ಹಲ್ಲು; ಸಿಮೆಂಟ್ ಫಿಲಿಂಗ್"

ಹೌದೆಂದು ತಲೆಯಾಡಿಸಿದಳು ಹೆಣ್ಣು. "Now keep quiet. I will conduct the interview"

"ಸ್ವಲ್ಪ ಇರಿ ಮೇಡಮ್. ಈ ಹುಡುಗ ನಿಮಗೆ ಸರಿಯಾದ ಜೋಡಿ. ಐ ವಿಲ್ ಎಕ್ಸ್ಸ್ ಪ್ಲೇಯ್ನ್ ಇಟ್ ಟು ಯು" ಸುಬ್ಬಣ್ಣ ಮಧ್ಯೆ ತಲೆ ಹಾಕಿದ.

"ಗೋ ಅಹೆಡ್"

"ಹುಡುಗ ಬಿ.ಎ. ಮಾಡಿದ್ದಾನೆ"

ಮುಂದಿನ ಪುಟ ನೋಡಿ ...

“ನಾನು ಎಂಜಿನಿಯರ್. ಬಿ.ಎ.ಗೂ, ಬಿ.ಇ.ಗೂ ಹೊಂದಿಕೆಯಾಗಲ್ಲ”

“ಎ ಫಾರ್ ಅಕ್ಸೆಪ್ಟೆನ್ಸ್, ಇ ಫಾರ್ ಎನ್ಫೋರ್ಸ್ ಮೆಂಟ್. ಗಂಡು-ಹೆಣ್ಣು ಎಂದರೆ ಅದೇ ಅಲ್ಲವೇ...”

“ಯೂ ಆರ್ ರೈಟ್. ಬಟ್ ಬಿ.ಎ...?”

“ಇದು ಆ ಬಿ.ಎ. ಅಲ್ಲ ಮೇಡಂ. ಬಿ ಅಲರ್ಟ್, ಬಿ ಅಕಾಮೊಡೇಟಿವ್, ಬಿ ಅಂಡರ್ ಸ್ಟ್ಯಾಂಡಿಂಗ್ ಅಂತ”

“ಓಹ್! ಗುಡ್. ಬಟ್ ಬಿ ಅಂಡರ್ ಸ್ಟ್ಯಾಂಡಿಂಗ್ ಅಂದ್ರೆ ಬಿ.ಯು. ಅಲ್ಲವಾ?”

“ಏನ್ಮೇಡಮ್ ನೀವು. ಈಗಿನ ಗ್ರಾಜುಯೇಟು ಅಂದ್ಮೇಲೆ ತ್ರೀ ವರ್ಡ್ಸ್ ಗೆ ಒಂದಾದರೂ ಸ್ಪೆಲಿಂಗ್ ಮಿಸ್ಟೇಕ್ ಇರಲೇಬೇಕಲ್ವಾ... ಸೋ, ಹಿ ಈಸ್ ರೈಟ್ ಟು ಎ ಫಾಲ್ಟ್”

“ಅಕ್ಸೆಪ್ಟೆಡ್. ಸ್ಯಾಲರಿ?”

“ನೀವು ಎಷ್ಟು ಕೊಟ್ಟರೆ ಅಷ್ಟು ಮೇಡಮ್” ಕೃಷ್ಣನ ಮುಂದಿನ ಅರ್ಜುನನಂತೆ ಕುಳಿತಿದ್ದ ಹುಡುಗನ ವಿನೀತ ದನಿ ಕೇಳಿಬಂತು.

“ವ್ಹಾಟ್? ನಾನೇ ಇವರಿಗೆ ಸಂಬಳ ಕೊಡಬೇಕಾ? ನಾನ್ಸೆನ್ಸ್”

“ಅದು ಹೆರಿಡಿಟರಿ ಮೇಡಂ. ಹುಡುಗನ ತಂದೆಗೂ ಹುಡುಗನ ತಾಯಿಯೇ ಸಂಬಳ ಕೊಡೋದು” ಎಂದ ಸುಬ್ಬಣ್ಣ.

“ಹೌ ಸ್ಟ್ರೇಂಜ್. ಹುಡುಗನ ತಂದೇನೂ ಕೆಲಸ ಮಾಡಲ್ವಾ?”

“ಮಾಡ್ತಾರೆ ಮೇಡಂ. ಅವರಿಗೆ ಸಂಬಳ ಚೆಕ್ ಮೂಲಕ ಬರತ್ತೆ. ಅದನ್ನ ಜಾಯಿಂಟ್ ಅಕೌಂಟ್ ಗೆ ಹಾಕಿ, ಹೆಂಡತಿ ಎಷ್ಟು ಕೊಟ್ಟರೆ ಅಷ್ಟು ಸಂಬಳ ತೊಗೋತಾರೆ. ಮಿಕ್ಕದ್ದು ಹೆಂಡತಿಯ ಸಂಪೂರ್ಣ ಹಕ್ಕುಳ್ಳದ್ದಾಗಿರುತ್ತದೆ”

“ಐ ಸೀ. ಅಂದರೆ... ಮಗನ ಸಂಬಳ ನನ್ನ ಅಕೌಂಟ್ ಗೆ ಬಂದು, ನಾನು ಕೊಟ್ಟಿದ್ದನ್ನ ಅಕ್ಸೆಪ್ಟ್ ಮಾಡ್ತಾರೇನ್ನಿ”

“ಎಕ್ಸಾಕ್ಟ್ಲಿ ಮೇಡಂ” ತಲೆ ಕುಣಿಸಿದರು ವರಪಿತೃ.

“ಹುಡುಗನಿಗೆ ಐವತ್ತು ಸಾವಿರ ಸಂಬಳ ಬರತ್ತೆ ಮೇಡಂ”

“ಅದು ನನ್ನ ಖರ್ಚಿಗೆ ಸಾಕು. ಅವರ ಖರ್ಚಿಗೆ ಏನು ಮಾಡ್ತಾರಂತೆ?”

“ನೋ ಪ್ರಾಬ್ಲಂ ಮೇಡಂ. ನನಗೆ ತವರುಮನೆ ಕಡೆಯ ಆಸ್ತಿ ಇದೆ. ಬಾಡಿಗೆ ಬರತ್ತೆ” ನುಡಿದ ಕು-ವರ.

“ಜಾತಕ?” ತೂರಿಬಂತು ಹುಡುಗಿಯ ಮತ್ತೊಂದು ಪ್ರಶ್ನೆ.

“ಒಂದು ಸಣ್ಣ ಪ್ರಾಬ್ಲಂ ಇದೆ” ಕೈ ಹೊಸಕಿಕೊಂಡ ಸುಬ್ಬಣ್ಣ.

“ಒದರಿ” ಹುಡುಗಿಯ ಹುಕುಂ ಹೊರಬಿತ್ತು.

“ಹುಡುಗನ ಜಾತಕದಲ್ಲಿ ಎಂಟನೆಯ ಮನೆಯಲ್ಲಿ ಕುಜ”

“so?”

“ಸಂಗಾತಿಯ ಮರಣ ಅನ್ನತ್ತೆ ಜಾತಕ”

“ನೋ ಪ್ರಾಬ್ಲಮ್. ನನ್ನ ಜಾತಕದಲ್ಲಿ 93 ವರ್ಷ ಆಯಸ್ಸು ಅಂತಿದೆ. ಇನ್ನು ಹೋದರೆ ಹುಡುಗನೇ. ಪ್ರಾಪರ್ ಇನ್ಶೂರೆನ್ಸ್ ಮಾಡಿಸಿಬಿಟ್ಟರೆ ಪ್ರಾಬ್ಲಂ ಸಾಲ್ವ್ಡ್”

ಹುಡುಗ ಬೆಚ್ಚಿಬಿದ್ದ.

“ಹೆಹೆಹೆ! ಜೋಕು. ಹುಡುಗಿ ಬಹಳ ತಮಾಷೆಯ ಸ್ವಭಾವದವಳು” ದೇಶಾವರಿ ನಗೆ ಬೀರಿದ ಸುಬ್ಬಣ್ಣ.

“ವಾಟ್ ಐ ಮೆಂಟ್ ವಾಸ್, ಸಾಮಾನ್ಯವಾಗಿ ಛತ್ರಿ ತೆಗೆದುಕೊಂಡು ಹೋದ ದಿವಸ ಮಳೆ ಬರಲ್ಲ. ಆನ್ ದ ಸೇಮ್ ಲೈನ್ಸ್, ಇನ್ಶೂರೆನ್ಸ್ ಮಾಡಿಸಿದರೆ ದೀರ್ಘಾಯಸ್ಸು” ಕ್ಲಾರಿಫೈಯಿಸಿದಳು ಕನ್ಯಾಮಣಿ.

“ಹುಡುಗಿಯ ಆರೋಗ್ಯ....?” ಮೂಗೆಳೆದರು ಹುಡುಗನ ತಾಯಿ.

“ವರ್ಕ್ ರಿಲೇಟೆಡ್ ವ್ಯತ್ಯಾಸಗಳು ಮಾತ್ರ ಇವೆ ಅಷ್ಟೆ” ಹುಡುಗಿಯ ತಾಯಿ ಹೇಳಿದರು.

“ಅಂದರೆ...?”

“ಸ್ವಲ್ಪೇ ಸ್ವಲ್ಪ ಬಿಪಿ. ಎಸಿಯಲ್ಲೇ ಕೆಲಸ ಮಾಡೋದ್ರಿಂದ ಟ್ರೇಸಸ್ ಆಫ್ ಸೈನಸೈಟಿಸ್, ಕೊಂಚ ಅಲರ್ಜಿ ಅಷ್ಟೆ”

“ಯಾವ್ಯಾವುದಕ್ಕೆ ಅಲರ್ಜಿ?”

“ಒಂದೇ ಐಟಂ. ಜೋರಾಗಿ ಮಾತನಾಡೋ ಗಂಡಸರು”

“ಆ ಸಂದರ್ಭ ನಮ್ಮ ಹುಡುಗನಿಂದ ಬರೋದೇ ಇಲ್ಲ ಬಿಡಿ” ವರಮಾತೆ ಆಶ್ವಾಸನೆ ಇತ್ತರು.

“ವೆರಿ ವೆಲ್. ನನ್ನ ಪ್ರಶ್ನೆಗಳಿವೆ. ಹುಡುಗನಿಗೆ ಯಾವ್ಯಾವ ಅಡುಗೆ ತಿಳಿದಿದೆ?” ಕೇಳಿದಳು ಪ್ರಶ್ನವದನೆ.

“ಎಲ್ಲ ಹೇಳಿಕೊಟ್ಟಿದ್ದೀನಮ್ಮ. ಸಾರು, ಹುಳಿ, ತಂಬುಳಿ, ಗೊಜ್ಜು, ಪುಡಿಗಳು, ಸಾಂಬಾರು....”

ಮುಂದಿನ ಪುಟ ನೋಡಿ ...

“ಪ್ಲೀಸ್ ಹೋಲ್ಡ್ ಆನ್ ಕುಡ್ ಬಿ ವುಡ್ ಬಿ ಅತ್ತೆ; ಆ ಗೊಡ್ಡೆಲ್ಲ ಅಲ್ಲದೆ ಮಾಡ್ರನ್ ಆದ್ದು ಏನು ಬರತ್ತೆ?”

“ಆರ್ಡರ್ ಮಾಡಿದತಕ್ಷಣ ಪೀಟ್ಜಾ, ಬರ್ಗರ್, ಪಾಸ್ಟಾ....” ಹುಡುಗ ದನಿಯೆತ್ತಿದ.

“ಆರ್ಡರ್ರೂ...? ಯಾರು, ಎಲ್ಲಿಗೆ ಮಾಡಬೇಕು?”

“ನೀವು, ನನಗೆ. ಆರ್ಡರ್ ಮಾಡಿದ ಅರ್ಧಗಂಟೆಯಲ್ಲಿ ಮಾಡಿಕೊಡುತ್ತೇನೆ”

ಗೃಧ್ರವದನೆ ಪ್ರಸನ್ನವದನೆಯಾದುದರ ಗುರುತಾಗಿ ಕಬ್ಬಿಣದ ಕಂಬಿಗಳು ಫಳಕ್ಕನೆ ಮಿಂಚಿದವು.

“ಸರಿ. ಹುಡುಗ ವೆರಿ ವೆಲ್ ಮ್ಯಾನರ್ಡು. ನನಗೆ ಒಪ್ಪಿಗೆ ಇದೆ. ಆನ್ ಒನ್ ಕಂಡೀಷನ್. ಅವರ ಮನೆ ನೋಡಬೇಕು”

ನಾನು, ಸುಬ್ಬಣ್ಣ, ಹುಡುಗ,ಹುಡುಗಿಯರ ಬೆಟಾಲಿಯನ್ ಮೂರು ಕಾರುಗಳಲ್ಲಿ ಏರಿದೆವು.

ಕಾರು ಸಾಗಿತು, ಮುಂದೆ ಹೋಯಿತು, ವರನ ಮನೆಯನು ಸೇರಿತು.

ಪ್ಲೀಸು ಆದಳು ಹುಡುಗಿ ಆದರು ಹುಬ್ಬಿನಲಿ ಗಂಟೇರಿತು.

“ಏನಾಯಿತು?” ಆತಂಕದಿಂದ ಕೇಳಿದರು ವರ ಪಿತೃ.

“ಮನೆ ಏನೋ ಚೆನ್ನಾಗಿದೆ. ಆದರೆ ಮಾಸ್ಟರ್ ಬೆಡ್ ರೂಮ್ ವಾಸ್ತು ಪ್ರಕಾರ ಇಲ್ಲ”

“ಪರಿಹಾರ?”

“ಈ ಮನೆಗೆ ನಾನು ಬಂದರೆ ಮಾಸ್ಟರ್ ಆಫ್ ದ ಹೌಸ್ ಆಗಕ್ಕಾಗಲ್ಲ. ಆದ್ದರಿಂದ...”

“ಆದ್ದರಿಂದ...?”

“ಹುಡುಗ ನಮ್ಮ ಮನೆಯಲ್ಲೇ ವಾಸಿಸಬೇಕು. ಹಾಗಿದ್ದರೆ ಓಕೆ”

ಹುಡುಗ ಬೆಪ್ಪಾದ; ಭಯಭೀತನಾದ. ತುಟಿಗಳು ಅದುರಿದವು. ಮುಖದಲ್ಲಿದ್ದ ರಕ್ತವೆಲ್ಲಾ ಮಾಯವಾಯಿತು. ಕಣ್ಣು ಕತ್ತಲಿಟ್ಟಿತು. ತಟ್ಟಾಡಿಕೊಂಡು ಹೋಗಿ ಗೋಡೆಗೊರಗಿ ನಿಂತ. ಅವನ ಮನಸ್ಸಿನಲ್ಲಿ ಗೋವಿನ ಹಾಡಿನ ಒಂದು ಚರಣವಾದ

ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿ ರಕ್ತವಿದೆಕೋ
ಚಂಡವ್ಯಾಘ್ರನೆ ನೀನಿದೆಲ್ಲವನುಂಡು ಸಂತಸದಿಂದಿರು

ಮತ್ತೆ ಮತ್ತೆ ಅನುರಣಿಸುತ್ತಿತ್ತು.

ವರಮಾತೆ ಅವನತ್ತ ಸಾಗಿದಳು. ಚೂಡಿದಾರಿನ ವೇಲ್ ನಿಂದ ಕಣ್ಣೊರೆಸಿಕೊಳ್ಳುತ್ತಾ “ನೋಡಪ್ಪಾ ಮಗನೇ, ಕೊಟ್ಟ ಗಂಡು ಕುಲಕ್ಕೆ ಹೊರಗು ಅಂತ ಗಾದೇನೇ ಇದೆ. ಏನೋ ದೊಡ್ಡ ಮನಸ್ಸು ಮಾಡಿ ಆ ಹೆಣ್ಣು ನಿನ್ನನ್ನು ಒಪ್ಪಿಕೊಂಡಿದೆ. ಯೋಚನೆ ಮಾಡಿ ಹೇಳು” ಎಂದರು.

“ನನಗೂ ಇದೇ ಪರಿಸ್ಥಿತಿ ಆಗಿತ್ತು ನನ್ನ ಕಂದಾ. ನಿಮ್ಮಮ್ಮನ ಜೊತೆ ಈ ಮನೆಗೆ ಬಂದಾಗ.... ನಿಮ್ಮಜ್ಜಿ ಸಿಂಹಿಣಿಯಂತಿದ್ದರು, ನನಗೆ ಗುಹೆಯೊಳಗೆ ಬಂದ ಅನುಭವ. ಧೈರ್ಯ ತಂದುಕೋ ಕಂದಾ.... ದೇವರಲ್ಲಿ ನಂಬಿಕೆಯಿಡು. ಹೆಂಡತಿಯನ್ನು ಕಂಡಾಗಲೆಲ್ಲ ಹನುಮಾನ್ ಚಾಳೀಸ, ಮೃತ್ಯುಂಜಯ ಮಂತ್ರ ಮನದಲ್ಲೇ ಹೇಳಿಕೋ” ಕಂಬನಿ ಸುರಿಸುತ್ತಾ ನುಡಿದರು ವರಪಿತೃ.

ಈ ಘಟನೆ ನಡೆದು ಒಂದು ವಾರವಾಗಿದೆ. ಅಂದು ಮೂರ್ಛೆ ಹೋದ ವರ ಈಗ ತಾನೇ ಐಸಿಯೂ ಇಂದ ವಾರ್ಡಿಗೆ ಶಿಫ್ಟ್ ಆಗಿದ್ದಾನೆ.

ಮದುವೆಯ ಬಗ್ಗೆ ತೀರ್ಮಾನ ಇನ್ನೂ ಪೆಂಡಿಂಗ್ ನಲ್ಲಿದೆ. ತಿಳಿದಾಕ್ಷಣ ನಿಮಗೆ ತಿಳಿಸುತ್ತೇನೆ. ಅಲ್ಲಿಯವರೆಗೆ....

ಶುಭಮಸ್ತು. ▪

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ದೇವರೆಲ್ಲಿದ್ದಾನೆ?

ಕನಕಾಪುರ ನಾರಾಯಣ

ಗಿರಾಕಿಯೊಬ್ಬ ಹಜಾಮರ ಅಂಗಡಿಗೆ ಹೋಗಿ ತಲೆ ಕೂದಲನ್ನು ತುಂಡರಿಸಿಕೊಳ್ಳಲು ಕುಳಿತ. ಎಂದಿನಂತೆ ಹಜಾಮ ಏನಾದರೊಂದು ವಿಷಯ ತೆಗೆದು ಗಿರಾಕಿಗಳನ್ನು ಮಾತನಾಡಿಸುವುದು ರೂಢಿ. ಅಂದು "ಏss ದೇವರೆಲ್ಲಿದ್ದಾನೆ ಸ್ವಾಮಿ? ಇಲ್ಲ,ಇದ್ದಿದ್ದರೆ ಪ್ರಪಂಚದಲ್ಲಿ ಇಷ್ಟೊಂದು ಬಡವರು, ರೋಗಿಗಳು ಯಾಕೆ ಇರ್ತಿದ್ರು?"ಅಂದ. ಸರಿ ಕೆಲಸ ಮುಗಿದ ಮೇಲೆ ಗಿರಾಕಿ ಬಾಗಿಲು ತೆರೆದು ಹೊರಗೆ ಹೊರಟ. ಎದುರುರಿನಲ್ಲೇ ಒಬ್ಬ ಗಡ್ಡಧಾರಿ ನಡೆದು ಹೋಗುತ್ತಿದ್ದ. ಅದನ್ನು ಕಂಡು ಹಜಾಮನನ್ನು ಕರೆದು "ನೋಡು ಈ ಪ್ರಪಂಚದಲ್ಲಿ ಹಜಾಮರೇ ಇಲ್ಲ" ಎಂದ. ಅದಕ್ಕೆ ಅವನು "ಅರೆ ಏನ್ ಸ್ವಾಮಿ ಇಲ್ಲೇ ಇದ್ದೀನಿ ಏನು ಹೀಗಂತೀರಾ?" ಎಂದ."ಇದ್ದಿದ್ದರೆ ಅವನು ಯಾಕೆ ಗಡ್ಡ ಬಿಟ್ಟುಕೊಂಡು ಓಡಾಡ್ತಿದ್ದಾನೆ?" ಎಂದು ಪ್ರಶ್ನಿಸಿದ. ಅದಕ್ಕೆ ಆ ಹಜಾಮ "ಅರೆ ಅವರಿಗೆ ಹಜಾಮ ಬೇಕಿದ್ದರೆ ನನ್ನ ಬಳಿ ಬರಬೇಕಪ್ಪಾ" ಎಂದು ಹೇಳುವಾಗಲಷ್ಟರಲ್ಲೇ ದೇವರ ಬಗ್ಗೆಯೂ ತಾನು ಹೇಳಿದ್ದ ನಂಬಿಕೆಯ ಮಾತು ಅರಿಯಾಯಿತು. ನಕ್ಕು ಕೆಲಸ ಮುಂದುವರೆಸಿದ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಖರ್ಜೂರದ ರಾಯತ

ಬೇಕಾಗುವ ಸಾಮಗ್ರಿಗಳು

- ಒಂದು ಲೋಟ ಮೊಸರು
- ನೂರು ಗ್ರಾಂ ಖರ್ಜೂರ
- ಒಂದು ಹೋಳು ತೆಂಗಿನತುರಿ
- ಕರಿಮೆಣಸು ನಾಲ್ಕು
- ಉಪ್ಪು ರುಚಿಗೆ

ಮಾಡುವ ವಿಧಾನ

- ಖರ್ಜೂರವನ್ನು ಬೀಜ ತೆಗೆದು, ಮೆಣಸು ಮತ್ತು ತೆಂಗಿನ ಕಾಯಿ ತುರಿಯೊಂದಿಗೆ ಸೇರಿಸಿ ರುಬ್ಬಿಕೊಳ್ಳಿ
- ಅದಕ್ಕೆ ಉಪ್ಪು ಸೇರಿಸಿ ಮೊಸರಿಗೆ ಬೆರೆಸಿ
- ಪುಟ್ಟ ಬಾಣಲೆಯಲ್ಲಿ ತುಪ್ಪದ ಒಗ್ಗರಣೆ ಮಾಡಿ ಮಿಶ್ರಣಕ್ಕೆ ಬೆರೆಸಿ, ಉಣಬಡಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಊರಿದ್ದರೂ ಜನರಿಲ್ಲ, ನದಿಯಿದ್ದರೂ ನೀರಿಲ್ಲ, ರಸ್ತೆಯಿದ್ದರೂ ತಿರುಗಾಡೋರಿಲ್ಲ, ನನ್ನಿಂದಲೇ ಮಾಹಿತಿ ನಿಮಗೆಲ್ಲ,

೨. ನೀರ್ಮೇಲೆ ನಡೆದಾಡೋ ನಾನಂದ್ರೆ ಎರಡು ಕಡೆಯವರಿಗು ಇಷ್ಟ, ನಾನು ಮುನಿಸಿಕೊಂಡ್ರೆ ನೋಡ್ಬೆಕು ಅವರ ಕಷ್ಟ

ಉತ್ತರಕ್ಕೆ ಪುಟ ೧೨ ನೋಡಿ

ನಿರೀಕ್ಷೆ ...



ನಲ್ಲ ಇವ ಬಹನೆಂದು
ಮೊಲ್ಲೆ ಮುಡಿದಿಹೆ ಇಂದು
ಇಲ್ಲೆ ಈಗಲೆ ಬಂದು
ಬೆಲ್ಲವಡಗಿಹ ಸಿಹಿ ಸೊಲ್ಲ ನುಡಿಯುವನೇ

ಹರಳಿನುಂಗುರವ ಬೆರಳಿಗಿಟ್ಟೆ
ಸರಳ ಸರವೊಂದ ಕೊರಳಿಗಿಳಿಬಿಟ್ಟೆ
ಹಳದಿ ಸೀರೆಯನುಟ್ಟೆ
ಹೊಳೆವ ಬಳೆಗಳನೂ ತೊಟ್ಟೆ;
ಬಳಿ ಸೆಳೆದೆದೆಗೆ ಎದೆಯನು ಕೊಟ್ಟು
ದುಗುಡ ಕಳೆಯುವನೇ

ಸತಿ ಪತಿ ಸುತರ ಜಗದೊಳೊಂದಾಗಿ
ಮತಿಯಿಟ್ಟು ಜಗಪತಿಯೊಳಗಿವನು
ಜತನ ಮಾಡುತ ನನ್ನ
ಜೀವನ ಪಥದಲ್ಲಿ
ಅತಿ ಮಾಡದೇ ಎಲ್ಲು, ನನ್ನೊಡನೆ ಎಂದೆಂದು
ಜೊತೆ ಜೊತೆಗೆ ನಡೆಯುವನೇ

ರಚನೆ: ಮಾಲು (ಅಡಿಲೈಡ್)

ಬಾ ...

ಕೆಲಸದ ಕಸವು ಕಲ್ಪನಾ ಲೋಕವ ಕಬಳಿಸಿದಾಗ
ಕೈ ಹಿಡಿದು ಕರೆಯಲು ಬಾ!
ಕಣ್ಣೆವೆಯಿಕ್ಕದೆ ಕಂಪ್ಯೂಟರ್ ಕಂಡ ಕಂಗಳಿಗೆ
ಕನಸ ಕಾಮನಬಿಲ್ಲು ತೋರು ಬಾ!

ಹೊಟ್ಟೆಪಾಡಿನ ಹೊಡೆತಕ್ಕೆ ಸಿಕ್ಕಿದ ಹೃದಯಕ್ಕೆ
ಹಿತವಾದ ತಂಗಾಳಿಯಂತೆ ಬಾ!
ವಾರವಿಡೀ ವಿಲವಿಲನೆ ಒದ್ದಾಡುತ್ತಿದ್ದ ಮನಕೆ
ವಾರದ ಕೊನೆಯಲ್ಲಿ ವರವಾಗಿ ಬಾ!

ಜೀವನ ಜೋಕಾಲಿ ಜೀಕುವವರಿಲ್ಲದೆ
ಜಡವಾದ ಜೀವಕ್ಕೆ ಜೋಗುಳ ಹಾಡಲು ಬಾ!
ಏಕಾಂತದಲಿ ಏಕಾಂಗಿಯಾಗಿ ಏರುಪೇರಾದ ಬದುಕಿಗೆ
ಏಳಿಗೆಯ ಕಾಣಿಸಲು ಬಾ!

ರಚನೆ: ಅಮರ್ ದೇವಧರ್ ಎಸ್, ಬೆಂಗಳೂರು

ಹಾಸ್ಯ ಚಿಲುಮೆ

ಕಂಠಪೂರ್ತಿ ಕುಡಿದು ಚರಂಡಿಯಲ್ಲಿ ಬಿದ್ದ ಕುಡುಕ. ಮಳೆ, ಗುಡುಗು, ಮಿಂಚು ಎಲ್ಲಾ ಬಡಿದರೂ ನಿಶೆ ಇಳಿಯದ ಕುಡುಕ ಹೇಳಿದ "ದೇವರೇ ಏನಪ್ಪ ನಿನ್ನ ಲೀಲೆ,ಮಳೆ ಬರಸೋನೂ ನೀನೆ, ಮೋರೀಲ್ ಬೀಳ್ಸೋನೂ ನೀನೆ, ಫೋಟೋ ತೆಗೆಸೋನೂ ನೀನೆ"

ಗುಂಡ:ನಿಮ್ಮೂರಲ್ಲಿ ಎಷ್ಟು ಹುಡುಗಿಯರಿದ್ದಾರೆ?
ಪಾಂಡು: ನಮ್ಮೂರಲ್ಲಿ ಎಲ್ಲಾ ಹುಡುಗೀರು ಸುಮಾರಾಗಿದ್ದಾರೆ.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಪ್ರಪಂಚದಲ್ಲೇ ಮೊಟ್ಟಮೊದಲು ಕುಟುಂಬ ಯೊಜನೆ ಸಂಸ್ಥೆ ಸ್ಥಾಪಿಸಿದ ಅರಸರು ಯಾರು?

೨. ಕನ್ನಡದಲ್ಲಿ ದೊರೆತಿರುವ ಮೊದಲ ನಾಟಕ ಯಾವುದು?

ಸರಿ ಉತ್ತರಕ್ಕೆ ಪುಟ ೧೯ ನೋಡಿ

ಇದೇನ್ಲಾ ಇದು – ಉತ್ತರ

೧. ಭೂಪಟ

೨. ದೋಣಿ

ಅಮೇರಿಕನ್ ಪ್ರಜಾಪ್ರಭುತ್ವ!

ನಾಗೇಂದ್ರ
ಅನಂತಮೂರ್ತಿ

ಅಮೆರಿಕನ್ ಪ್ರಜಾಪ್ರಭುತ್ವ ಎಂದೊಡನೆ ಅಮೆರಿಕಾದ ಮಾದರಿ ಪ್ರಜಾಪ್ರಭುತ್ವ ಅಥವಾ ಸಂವಿಧಾನ ಎಂದು ತಿಳಿಯಬೇಕಿಲ್ಲ. ಇಲ್ಲಿ ನಾನು ಪ್ರಸ್ತಾಪಿಸುತ್ತಿರುವುದು ಸೂಪರ್ ಪವರ್ ಆಗಿರುವ ಅಮೇರಿಕಾ ತನಗೆ ಬೇಕಾದ ಹಾಗೆ ಇತರ ರಾಷ್ಟ್ರಗಳು ನಡೆಯಬೇಕು ಎಂದು ಪ್ರತಿಪಾದಿಸುವುದರ ಬಗ್ಗೆ ಹಾಗು ಅದನ್ನೇ ಡೆಮಾಕ್ರಸಿ ಎಂದು ಹೇಳುವುದರ ಬಗ್ಗೆ.

ಸದ್ಯಕ್ಕೆ ಬಹಳ ಪ್ರಸ್ತುತವಾದುದು ಇರಾಕ್, ಆಫ್ಘಾನಿಸ್ತಾನ್ ಹಾಗು ಉಕ್ರೇನ್ ದೇಶಗಳ ಸಮಸ್ಯೆ ಮತ್ತು ಈ ದೇಶಗಳ ವಿಷಯದಲ್ಲಿ ಅಮೇರಿಕಾದ ನೀತಿಯ ಬಗ್ಗೆ.

ಇರಾಕ್ ದೇಶದ ವಿಷಯಕ್ಕೆ ಬಂದರೆ, ಅಮೆರಿಕಾ ೨೦೦೩ ರಲ್ಲಿ ನಡೆಸಿದ ಧಾಳಿಗೆ ಮೂಲಘೋಷಿತ ಕಾರಣ ಎಂದರೆ, ಇರಾಕ್ ತನ್ನ ಬಳಿ ಮಾರಣಾಂತಿಕವಾದ ರಾಸಾಯನಿಕ ಮತ್ತು ಜೈವಿಕ ಆಯುಧಗಳನ್ನು ಹೊಂದಿದೆ ಎಂದು. ಅಲ್ಲದೆ ಇರಾಕಲ್ಲಿ ಸದ್ದಾಮರ ಆಡಳಿತ ಕೊನೆಗಾಣಿಸುವುದು. ಆದರೆ ಅಮೇರಿಕಾ, ಮೊದಲ ಕಾರಣವನ್ನು ಮಾರಣಾಂತಿಕ ಅಸ್ತ್ರಗಳು ಸಿಗದಿದ್ದಕ್ಕಾಗಿ ಹಿಂದಿಕ್ಕಿ, ಸದ್ದಾಂರ ದುರಾಡಳಿತ ಕೊನೆಗಾಣಿಸಿ ಇರಾಕಿಗರನ್ನು ಸ್ವತಂತ್ರಗೊಳಿಸುವುದು ಮುಖ್ಯ ಕಾರಣ ಎಂದು ಅನ್ಯದೇಶದ ವಿಚಾರದಲ್ಲಿ ತಲೆ ಹಾಕಿ ಕೊನೆಗೂ ಯಾವುದೋ ಒಂದು ಕಾರಣಕ್ಕೆ ಸದ್ದಾಂರನ್ನು ಗಲ್ಲಿಗೇರಿಸಿದ್ದಾಯಿತು.



ಇದಲ್ಲದೆ ಕೆಲವು ಅಘೋಷಿತ ಕಾರಣಗಳಲ್ಲಿ ಇರಾಕಿನ ತೈಲಸಂಪತ್ತಿನ ಮೇಲೆ ಹಿಡಿತ ಸಾಧಿಸುವುದು. ಏಕೆಂದರೆ ತೈಲದ ಮೇಲೆ ಹಿಡಿತವಿರುವವರು ಪ್ರಪಂಚದ ಆರ್ಥಿಕ ನಾಯಕರಾಗುವರೆಂದು. ಇರಾಕ್ ೨೦೦೩ ರಲ್ಲಿ ಪ್ರಪಂಚದ ಶೇ ೨೫ ರಷ್ಟು ತೈಲ ಉತ್ಪಾದಿಸುತ್ತಿತ್ತು ಮತ್ತು ಪ್ರಪಂಚದ ಶೇ೬೦ ತೈಲ ನಿಕ್ಷೇಪವನ್ನು ಹೊಂದಿದ್ದಲ್ಲದೆ, ದೇಶದ ಶೇ ೯೦ ರಷ್ಟು ಅನ್ವೇಷಣೆಯಾಗಿರಲಿಲ್ಲ. ಸೌದಿ ಅರೇಬಿಯಾ ನಂತರದ ಸಾಮರ್ಥ್ಯದಲ್ಲಿ ಎರಡನೆಯ ಸ್ಥಾನದಲ್ಲಿತ್ತು. ಇದಕ್ಕೆ ಪೂರಕವಾಗಿ ಅಮೆರಿಕಾ ಪ್ರಪಂಚದ ಅತಿ ಹೆಚ್ಚು ತೈಲ ಆಮದು ಮಾಡುವ ದೇಶ. ೧೯೯೯ ರಲ್ಲಿ ಇರಾನ್ ಮತ್ತು ೨೦೦೦ ದಲ್ಲಿ ಇರಾಕ್ ತೈಲ ವಹಿವಾಟನ್ನು ಅಮೆರಿಕನ್ ಡಾಲರ್ ಗೆ ಪರ್ಯಾಯವಾಗಿ ಯುರೋ ವಿನಿಮಯದಲ್ಲಿ ಮಾಡಲು ಆರಂಭಿಸಿದರು. ಮುದ್ರಿತವಾದ ಅಮೆರಿಕನ್ ಡಾಲರಿಗೆ ಬೆಲೆ ಇಲ್ಲದಾಗಿ ಅಮೇರಿಕಾ ಆರ್ಥಿಕ ಸಂಕಟವನ್ನು ಎದುರಿಸಬೇಕಾಗುತ್ತಿತ್ತು. ಇದೇ ಸಮಯದಲ್ಲಿ ೨೦೦೩ ರಲ್ಲಿ ಇರಾಕಿನ ಮೇಲೆ ಧಾಳಿ ಮಾಡಲಾಯಿತು. ಮಾರಕಾಸ್ತ್ರದ ಕಾರಣವೇ ಪ್ರಮುಖವಾಗಿದ್ದರೆ ಅಣ್ವಸ್ತ್ರ ಹೊಂದಿದ ಭಾರತ, ಪಾಕಿಸ್ತಾನ ಹಾಗು ಅಣ್ವಸ್ತ್ರದ ಅನುಮಾನವಿರುವ ಇರಾನ್ ಮತ್ತು ಉತ್ತರ ಕೊರಿಯಾ ಮೇಲೇಕೆ ಧಾಳಿ ಮಾಡಲಿಲ್ಲ?. ಅಲ್ಲದೆ ಧಾಳಿಯ ನಂತರ ಅಮೆರಿಕಾದ ಸೇನೆ ಇರಾಕಿನ ತೈಲ ಮಂತ್ರಾಲಯವನ್ನು ಮಾತ್ರ ಹತೋಟಿಗೆ ತೆಗೆದುಕೊಂಡು, ಆರಕ್ಷಣೆ, ಇರಾಕ್ ಸೇನೆ ಎಲ್ಲವನ್ನು ವಜಾಗೊಳಿಸಿ ದೇಶದ ಅಧೋಗತಿಗೆ ಕಾರಣವಾಯಿತು.

ಧಾಳಿಯ ಸಮಯ ಇದ್ದ ಕಾರಣವನ್ನು ಸಾಬೀತುಪಡಿಸಲಾಗದಿದ್ದಾಗ, ಸದ್ದಾಂರ ಆಡಳಿತವನ್ನು ದೂರಲಾಯಿತು ಮತ್ತು ಸದ್ದಾಂರನ್ನು ಬಂಧಿಸಿ ೧೯೮೨ ರಲ್ಲಿ ನಡೆದ ೧೪೮ ಜನರ ಹತ್ಯೆಗೆ ಕಾರಣರೆಂದು ಗಲ್ಲಿಗೇರಿಸಲಾಯಿತು. ಸದ್ದಾಮ್ ಒಬ್ಬ ಸರ್ವಾಧಿಕಾರಿಯಾಗಿದ್ದರೂ ಅವರ ಕಾಲದಲ್ಲಿ ಆದ ಹತ್ಯೆಗಳೆಷ್ಟು ಮತ್ತು ಅಮೇರಿಕ ಧಾಳಿಯಿಂದಾದ ಸಾವುನೋವುಗಳೆಷ್ಟು? ಧಾಳಿಯ ಸಮಯ ಇಲ್ಲದ Shi'ites ಮತ್ತು Sunnis ಕಾರಣ ಮತ್ತು ವಿವಾದ ಹಾಗು ಹಿಂಸೆ ಈಗ ಎಲ್ಲಾ ಮೀಡಿಯಾಗಳಲ್ಲೂ ಸಹ ಮುಖ್ಯವಾಗಿ ಪ್ರತಿ ಘಳಿಗೆ ಮಿಂಚುತ್ತಿದೆ. ಇದು ಅಂದಿನ ಅಮೆರಿಕಾದ ತಪ್ಪನ್ನು ಮರೆ ಮಾಡಿ ಬೇರೆಯ ರೂಪ ಕೊಡುವ ಹುನ್ನಾರವೇ?

ಸದ್ದಾಂಗೆ ೧೪೮ ಜನರ ಹತ್ಯೆಗೆ ಗಲ್ಲಾದರೆ ೧೧ವರ್ಷಗಳಿಂದ ಸಾಯುತ್ತಿರುವ ಇರಾಕಿನ ಸಾವಿರಾರು ಜನರ ಹತ್ಯೆಗೆ ಜವಾಬ್ದಾರಿ ಯಾರು? ಧಾಳಿಯ ಸಮಯದಲ್ಲಿ ಇರಾಕಿನ ನಿರ್ಧಾರ ಬೇಕಿರಲಿಲ್ಲ. ಆದರೆ ಈಗ ಇರಾಕಿನಲ್ಲಿ ಅಮೇರಿಕಾದ ಪಾತ್ರದ ಬಗ್ಗೆ ಕೇಳಿದರೆ ಇರಾಕ್ ಸರ್ಕಾರದಿಂದ ಸರಿಯಾದ ರಾಜಕೀಯ ಯೋಜನೆ ಬೇಕು ಮತ್ತು ಅದು ಅಲ್ಲಿನ ಸರ್ಕಾರದ ಜವಾಬ್ದಾರಿ ಎಂದು ಧಾಳಿ ನಡೆಸಿ ಇದುವರೆಗೂ ಸಾವು ನೋವಿಗೆ ಕಾರಣರಾದ ಅಮೆರಿಕಾದ ಉತ್ತರ ಎಷ್ಟು ಸಮಂಜಸ?

ಅಮೇರಿಕಾ ಪ್ರಕಾರ ಪ್ರಜಾಪ್ರಭುತ್ವ ಎಂದರೆ ಅವರ ಸ್ನೇಹಿತರೆ? ಅಂದರೆ ಅವರಿಗೆ ಬೇಕಾದ ಹಾಗೆ ಇರುವುದೇ ಪ್ರಜಾಪ್ರಭುತ್ವವೇ? ಪ್ರಪಂಚದ ಸಾರ್ವಭೌಮತ್ವ ಸಾಧಿಸಲು ಇದೇ ದಾರಿಯೇ? ಯೋಚಿಸಿ ನೋಡಿ ನೀವೇ ಹೇಳಿ. ▪

ಮಾಹಿತಿಯುಕ್ತ ಉಪಯುಕ್ತ ಕೊಂಡಿಗಳು

http://iraquna2.blogspot.com.au/2005/06/why-did-america-invade-iraq.html

http://www.theguardian.com/world/2004/jul/28/iraq.usa

http://www.popularsocialscience.com/2012/10/25/why-did-the-united-states-invade-iraq-in-2003-2/

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1. ಕನ್ನಡ ಚಿತ್ರರಂಗದ ಸಣ್ಣವರಲ್ಲ, ಹೆಸರಾಂತ ನಿರ್ದೇಶಕ. ಇವರು ಈಗಿಲ್ಲ

2. ನೇತ್ರಧಾರೆ ಹರಿಸುವ ತರಕಾರಿ

3. ನಿದ್ರೆಯಲ್ಲಿ ಶಬ್ದ ಜೋರಾಗಿದೆ

4. ಚಿನ್ನದ ಜಿಂಕೆ, ಪರಸತಿ ಬಯಕೆಯ ಸಂಹಾರದ ಕಥೆ?

5. ಕರ್ನಾಟಕ ಮತ್ತು ಹಿಂದುಸ್ಥಾನಿ ಇವೆರಡೂ...

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ನಿಗೂಢ ಪದ ಹುಡುಕಿ

ಕನ್ನಡದ ವೀರಯೋಧ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜುಲೈ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜೂನ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ಬಿ.ಆರ್. ವತ್ಸಲ ದ್ವಾರಕನಾಥ್ , ಕೆ.ಜಿ.ಎಫ್
- ಶ್ರೀಧರ್ ಬಾಣಸಂದ್ರ, ಕ್ಯಾನ್ಬೆರ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ಚಂದ್ರಿಕಾ ಉದಯ್, ಸಿಡ್ನಿ
- ಶ್ರೀಲಕ್ಷ್ಮಿ ಗಾಯತ್ರಿ ಪ್ರಕಾಶ್, ಬೆಂಗಳೂರು
- ರೇಖ ಶಶಿಕಾಂತ್, ಸಿಡ್ನಿ
- ಗೀತ ಪ್ರಸಾದ್ , ಅಡಿಲೇಡ್

ಜೂನ್ ತಿಂಗಳ ಪದಪುಂಜದ ಉತ್ತರ

1. ವೀರರೂ ಇರಬಹುದು, ಇವರು ಒಂದು ಪುಣ್ಯಕ್ಷೇತ್ರದ ಧರ್ಮಾಧಿಕಾರಿ

ವೀ	ರೇಂ	ದ್ರ	ಹೆ	ಗ್ಗ	ಡೆ

2. ಪುತ್ತೂರಿನ ಈ ನಾಯಕ ಸುಪ್ರಸಿದ್ಧ ಗಾಯಕ

ನ	ರ	ಸಿಂ	ಹ	ನಾ	ಯ	ಕ್

3. ತುಂತುರು, ಗುಡುಗು, ಸಿಡಿಲು, ಕುಂಭದ್ರೋಣ ಎಲ್ಲಾ ನನ್ನಿಂದಲೇ

ಮೋ	ಡ

4. ಕೊಟ್ಟೋನು ಕೋಡಂಗಿ, ಇಸ್ಕೊಂಡೋನು?

ಈ	ರ	ಭ	ದ್ರ

5. ಭುವಿಯಲ್ಲಿ ಅವತಿರುವೆ, ಗಣಿಗಾರಿಕೆ ಮಾಡಿ ನನ್ನನ್ನು ತೆಗೆಯುತ್ತಾರೆ

ಅ	ದಿ	ರು

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ನಿಗೂಢ ಪದ ಹುಡುಕಿ

ಭಾರತದ ಉದ್ದಗಲ ಎಲ್ಲೆಲ್ಲೂ ಈತನ ಹೆಸರು ಈಗ?

ನ	ರೇಂ	ದ್ರ	ಮೋ	ದಿ

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!



15 – 8

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪ ವೆಂಕಟೇಶ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ ಲೇಖನದ **ಕೊನೆಯ** ಕಂತು ...

ಕನಸಿನಂತಾಗಿರುವ ಇಪ್ಪತ್ತೈದು ವರ್ಷಗಳ ಹಿಂದಿನ ಸಾಧನೆಯ ವಿವರಗಳನ್ನು ಬರೆಯುತ್ತಾ ಹೋದಂತೆ, ನನಗೇ ಅರಿವಿಲ್ಲದಂತೆ ಅನೇಕ ಘಟನೆಗಳು ಕಣ್ಣಮುಂದೆ ಇಂದು ನೆನ್ನೆ ನಡೆದಂತೆ ನಿಚ್ಚಳವಾಗಿ ನೆನಪಿಗೆ ಬಂದಿದ್ದವು. ನಾನೂ, ನನ್ನಣ್ಣ ಬರೆದಿಟ್ಟಿದ್ದ ದಿನಚರಿಗಳ, ಅದೆಷ್ಟನೆಯ ಸಾರಿಯೋ, ಮತ್ತೆ ಮತ್ತೆ ಓದಿದೆ. ಊರಿಗೆ ಫೋನ್ ಮಾಡಿ ನನ್ನಣ್ಣನೊಡನೆ ಅನೇಕ ವಿಷಯಗಳ ಕುರಿತು ಚರ್ಚಿಸಿದೆ. ಹೀಗಾಗಿ ನನಗೇ ಅರಿವಿಲ್ಲದಂತೆ, ಚಿಲುಮೆಯ ರೂವಾರಿಗಳ ಸತತ ಪ್ರೋತ್ಸಾಹ, ಮನೆಯವರ, ಓದುಗರ ಆಸಕ್ತಿಗಳೂ ಬೆರೆತು, ಎರಡನೆಯ ಬಾರಿಗೆ ನನ್ನ ಸೈಕಲ್ ಪಯಣ ಸಾಹಿತ್ಯದ ರೂಪದಲ್ಲಿ ನಡೆಯಿತು. ಎರಡು ಕಂತಿನಲ್ಲಿ ಬರೆಯಬಹುದೆಂದುಕೊಂಡಿದ್ದು ಏಳೆಂಟು ಕಂತುಗಳಾಯಿತು. ಮುಗಿಸುವಾಗ ಮತ್ತೊಮ್ಮೆ ಪಯಣವೇ ಮುಗಿದುಹೋಯಿತೇನೋ ಎನ್ನುವಷ್ಟು ಬೇಸರವೂ ಆಯಿತು. ಈಗ ನನ್ನ ಪಯಣದಿಂದಾಚೆಗಿನ ಕೆಲವು ವಿಷಯಗಳನ್ನು ಹೇಳಿ, ಈ ಮಾಲಿಕೆಯನ್ನು ಮುಗಿಸುತ್ತೇನೆ.

"ದುಡ್ಡು ಉಳಿಸಕ್ಕೆ ಸೈಕಲ್ ನಲ್ಲಿ ಹೋಗ್ತೀರಾ?" ಬಹಳಷ್ಟು ಜನ ನಮಗೆ ಕೇಳಿದ ಪ್ರಶ್ನೆ ಇದು.

"ದೆಹಲಿ ನೋಡಬೇಕೆಂದರೆ ಅಷ್ಟೊಂದು ಕಷ್ಟ ಪಡಬೇಕಾ, ಚೆನ್ನಾಗಿ ದುಡ್ಡು ಸೇರಿದ ಮೇಲೇ ಹೋದರಾಯ್ತಲ್ಲವಾ!". ಅಂದರು ಕೆಲವರು. ನಮಗಾದ ಖರ್ಚು ಕೇಳಿ, " ಆ ಪಾಟಿ ದುಡ್ಡು ಸುರಿದು, ಸೈಕಲ್ ಮೇಲೆ ಹೋಗೋ ಅಂಥಾ ಹುಚ್ಚು ಯಾಕೊ, ಅದರ ಬದಲಾಗಿ ಪ್ಲೇನ್ ನಲ್ಲೇ ಆರಾಮವಾಗಿ ಹೋಗಿ ಬರಬಹುದಿತ್ತಲ್ಲವಾ!" ಎಂದರು ಮತ್ತೊಂದಷ್ಟು ಜನ.

ಹೊರಟು ಕೇವಲ ಎರಡು ಗಂಟೆಗಳಾಗಿರಲಿಲ್ಲ, ಆಗಲೇ ದಾರಿಯಲ್ಲಿ ಸಿಕ್ಕ ಒಬ್ಬ ರೈತ, ನಾವು ದೆಹಲಿಗೆ ಸೈಕಲ್ ನಲ್ಲಿ ಹೋಗುತ್ತಿದ್ದೇವೆ ಎಂದಾಗ, ಬಿದ್ದು ಬಿದ್ದು ನಗುತ್ತಾ, "ನಗಸಾರ ಮಾಡಬೇಡಿ ಬುದ್ದಿ, ದಿಟ ಹೇಳಿ ಎಲ್ಲೋಯ್ತೀರಾ ಅಂತ", ಎಂದು ನಮ್ಮನ್ನು ಹುಚ್ಚರಂತೆ ನೋಡಿದ. ಅದಾದ ಮೇಲೆ ನಮ್ಮಣ್ಣ, "ನಾವು ದೆಹಲಿಗೆ ಹೋಗುತ್ತಿದ್ದೇವೆಂದು ನೀನು ಯಾರ ಬಳಿಯೂ ಈಗಲೇ ಕೊಚ್ಚಿಕೊಳ್ಳಬೇಡ" ಎಂದು ಆದೇಶಿಸಿದ.

ದುಡ್ಡು ಉಳಿಸುವ ಪ್ರಶ್ನೆ: ನಮ್ಮ ಸೈಕಲ್ ಪ್ರವಾಸಕ್ಕೆ ನಮಗೆ ಅಂದು ಆಗಿದ್ದ ಖರ್ಚು ಒಬ್ಬೊಬ್ಬರಿಗೂ ನಾಲ್ಕು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು. ನಮ್ಮ ಪ್ರವಾಸದ ವೆಚ್ಚವನ್ನು ಭರಿಸಿರೆಂದು ನಾವು ಯಾರ ಬಳಿಯೂ ಹೋಗಿರಲಿಲ್ಲ, ಸಂಪೂರ್ಣ ನಮ್ಮದೇ ಖರ್ಚು. ನಾವು ಉಳಿದುಕೊಳ್ಳುತ್ತಿದ್ದುದೂ ದಾರಿಯಲ್ಲಿ ಸಿಗುತ್ತಿದ್ದ ಹೋಟೆಲ್ ಗಳಲ್ಲಿ. ಒಂದು ರಾತ್ರಿಗೆ ೩೦ ರೂಪಾಯಿಗಳಿಂದ ಹಿಡಿದು, ಕೆಲವು ದೊಡ್ಡ ಊರುಗಳಲ್ಲಿ ರಾತ್ರಿಗೆ ೧೨೦ ರೂಪಾಯಿಗಳ ವರೆವಿಗೂ ಕೊಟ್ಟಿದ್ದೆವು.

ಊಟ ತಿಂಡಿಗೂ ಬಹುಪಾಲು ಹಣ ಖರ್ಚಾಗುತ್ತಿತ್ತು. ನಾವು ಪಡುತ್ತಿದ್ದ ಶ್ರಮದಿಂದಾಗಿ ಚೆನ್ನಾಗಿ ಹಸಿವಾಗುತ್ತಿತ್ತು. ಹಲವು ಸಲ ಊಟ ಒಂದು ಕಡೆ ಸರಿಹೋಗಲಿಲ್ಲವೆಂದರೆ, ಕೂಡಲೇ ಮತ್ತೊಂದು ಕಡೆ ತಿನ್ನುತ್ತಿದ್ದೆವು. ಪರೋಟ, ಸಿಹಿತಿಂಡಿಗಳು, ಕಾಫಿ, ಟೀ, ಹಾಲು ಗಳನ್ನು ಯಥೇಚ್ಛವಾಗಿ ಸೇವಿಸುತ್ತಿದ್ದೆವು. ದೆಹಲಿಯಲ್ಲಂತೂ ನಮ್ಮೂರಿನ ಊಟ ಹುಡುಕಿಕೊಂಡು, ದಕ್ಷಿಣ ಭಾರತದ ಹೆಸರಿರುವ ಹೋಟೆಲ್ ಗಳಿಗೆಲ್ಲಾ ನುಗ್ಗಿದ್ದೆವು.

ಮೊದಲೇ ಡಿಸೆಂಬರ್ ತಿಂಗಳು, ಉತ್ತರಕ್ಕೆ ಹೋದಂತೆಲ್ಲಾ ರಾತ್ರಿಯಲ್ಲಿ ಕೊರೆಯುವ ಚಳಿ, ಹಾಗಾಗಿ ಕೆಲವು ಕಡೆ ಹೋಟೆಲ್ ಗಳಲ್ಲಿ ಹೆಚ್ಚಿನ ದುಡ್ಡು ಕೊಟ್ಟು ರಜಾಯಿಗಳನ್ನು ಪಡೆಯಬೇಕಾಗುತ್ತಿತ್ತು.

ಹೀಗೆಲ್ಲಾ ಇರಲು ದುಡ್ಡನ್ನೆಲ್ಲಿಂದ ಉಳಿಸುವುದು.

ಸೈಕಲ್ ಮೇಲೆ ಹೋಗುವುದೊಂದು ಹುಚ್ಚು: ಹೌದು, ಏರೋಪ್ಲೇನಿನಲ್ಲೋ, ರೈಲಿನಲ್ಲೋ ಹೋಗಿ, ಇಷ್ಟೇ ಖರ್ಚಿನಲ್ಲಿ, ಇನ್ನೂ ಬೇಗ ಈ ಎಲ್ಲ ಊರುಗಳನ್ನೂ ಇನ್ನೂ ಚೆನ್ನಾಗಿ ನೋಡಿಕೊಂಡು ಬಂದಿರಬಹುದಿತ್ತು. ಆದರೆ ಇಪ್ಪತ್ತೈದು ವರ್ಷಗಳಾದ ನಂತರವೂ, ಇಂದು ನಾನು ಈ ರೀತಿ ನಿಮ್ಮ ಬಳಿ ಹಂಚಿಕೊಳ್ಳುವಂತಹದ್ದೇನೂ ಇರುತ್ತಿರಲಿಲ್ಲ.

ಅಷ್ಟೇ ಅಲ್ಲ, ನನಗೆ ಬೇಕಾದ ಕಡೆ ನಿಂತು, ಪ್ರಕೃತಿಯನ್ನು ಆಸ್ವಾದಿಸುತ್ತಿದ್ದೆ. ದಾರಿಯುದ್ದಕ್ಕೂ ಕಾಣುತ್ತಿದ್ದ ವಿವಿಧ ರೀತಿಯ ಬೆಳೆಗಳನ್ನು ಹತ್ತಿರ ಹೋಗಿ ಪರೀಕ್ಷಿಸಿ, ಅಲ್ಲಿನ ರೈತರನ್ನು ಮಾತನಾಡಿಸಿ ವಿಷಯ ತಿಳಿದುಕೊಳ್ಳುತ್ತಿದ್ದೆ. ಬೆಳೆದಿರುತ್ತಿದ್ದ ಹಣ್ಣುಗಳು, ಕಬ್ಬು, ಕಬ್ಬಿನ ಹಾಲುಗಳನ್ನು ರೈತರು, ವಿಶ್ವಾಸದಿಂದ ನೀಡಿದರೆ, ಸಂತೋಷದಿಂದ ಸ್ವೀಕರಿಸುತ್ತಿದ್ದೆವು. ವಿವಿಧ ಪ್ರದೇಶದ ಜನತೆಯ ಜೀವನವನ್ನು ಹತ್ತಿರದಿಂದ ಕಾಣುತ್ತಿದ್ದೆವು. ಮಾಲಿಕೆಯಲ್ಲಿ ನಾನು ಬರೆದಿರುವ ಅನೇಕ ಮನ ಮಿಡಿಯುವ ಸನ್ನಿವೇಶಗಳ ಅನುಭವಗಳಂತೂ, ರೈಲು, ವಿಮಾನಗಳಲ್ಲಿ ಖಂಡಿತ ದೊರೆಯುತ್ತಿರಲಿಲ್ಲ. ಜಗತ್ಪ್ರಸಿದ್ಧವಾದ ತಾಜ್ ಮಹಲ್, ದೆಹಲಿಯ ಭವನಗಳು, ಜಯಪುರ್, ಉದಯಪುರಗಳ ಅರಮನೆಗಳಿಗಿಂತಲೂ ಮನಸೆಳೆಯುವ,ಆದರೆ ಹೆಸರು ಮಾಡದ ಅನೇಕ ಸ್ಥಳಗಳಿದೆಯೆಂದರಿವಾಯಿತು. ನಮ್ಮ ದೇಶದ ಹಲವಾರು ರೀತಿಯ ಪ್ರಾಕೃತಿಕ ಸೌಂದರ್ಯ, ಹವಾಮಾನ, ಭೌಗೋಳಿಕ ವೈವಿಧ್ಯತೆಗಳ ಪರಿಚಯವಾಯಿತು.

ಮುಂದಿನ ಪುಟ ನೋಡಿ ...

ಒಟ್ಟಿನಲ್ಲಿ ಹೇಳುವುದಾದರೆ ಯಾವುದೇ ವಿದ್ಯಾಲಯದಲ್ಲೂ ಕಲಿಸದ ವಿಷಯದಲ್ಲಿ ಪದವಿ ಪಡೆದಂತಾಯಿತು.

ಈಡೇರಿದ ಬಯಕೆ: ಈ ಲೇಖನ ಮಾಲೆಯ ಆರಂಭದಲ್ಲಿ ಬರೆದಿದ್ದೆ, ಹರಿದ್ವಾರದ ಮಾನಸಾದೇವಿಯ ಮಂದಿರದಲ್ಲಿ, ಮುಂದೊಂದು ದಿನ, ನನ್ನ ತಾಯ್ತಂದೆಯರನ್ನು ಹಿಮಾಲಯದ ಯಾತ್ರೆಗೆ ಕರೆದುಕೊಂಡು ಬರುವ ನಿರ್ಧಾರ ಮಾಡಿದ್ದೆನೆಂದು. ಸುಮಾರು ಎರಡೂವರೆ ವರ್ಷಗಳ ನಂತರ ಆ ಬಯಕೆಯನ್ನು ಈಡೇರಿಸಿಕೊಂಡೆ. ಮೇ ೧೯೯೧ ರಲ್ಲಿ ಅವರನ್ನು ಬದರಿ, ಕೇದಾರ, ಕಾಶಿ, ಗಯಾಗಳಿಗೆ ಕರೆದುಕೊಂಡು ಹೋಗಿಬಂದೆ. ಆಗ ಅವರಿಗಾದ ಆನಂದ ಕಂಡು, ನನ್ನ ಜನ್ಮ ಸಾರ್ಥಕವೆನಿಸಿತ್ತು.

ಗೂಟಿ ಬಳಿ ನೋಡಿದ ಸೂರ್ಯಾಸ್ತಮಾನ

ದಾರಿಯಲ್ಲಿ ಕಂಡ ಹಚ್ಚ ಹಸಿರಿನ ಗದ್ದೆ





ಡೈರಿಯಿಂದ ಒಂದಷ್ಟು ಪುಟಗಳು

ಇದುವರೆವಿಗೂ ನನ್ನಣ್ಣನಿಗೆ ತಿಳಿಸದ ವಿಷಯ: ಉದಯಪುರಕ್ಕೆ ಬಂದಾಗ ನಮ್ಮ ಕ್ಯಾಮೆರಾ ಕೆಟ್ಟುಹೋಯಿತೆಂದು ತಿಳಿಸಿದ್ದೇನೆ. ನನ್ನಣ್ಣನಿಗಂತೂ ಸಂಗಾತಿಯೇ ಇಲ್ಲವಾದಂತಾಯಿತು. ಅವನಿಗೆ ವಿಪರೀತ ಫೋಟೊ ತೆಗೆಯುವ ಹುಚ್ಚು. ತುಂಬಾನೇ ಬೇಜಾರು ಮಾಡಿಕೊಂಡು ಬಿಟ್ಟ. ಬೇರೊಂದು ಕ್ಯಾಮೆರಾ ತೆಗೆದುಕೊಳ್ಳಬೇಕೆಂದರೆ, ಹಣದ ಬಗ್ಗೆಯೂ, ಎಚ್ಚರವಹಿಸಬೇಕಿತ್ತು. ಸರಾಸರಿ ದಿನಕ್ಕೆ ಇಷ್ಟು ಎಂಬಂತೆ ಖರ್ಚು ಲೆಕ್ಕ ಹಾಕಿಕೊಂಡು, ದುಡ್ಡು ಬಳಸುತ್ತಿದ್ದೆವು. ಹಾಗಾಗಿ ನಮ್ಮ ಬಳಿ ಹೆಚ್ಚಿನದೇನೂ ಹಣವಿರಲಿಲ್ಲ. ತುರ್ತಿನ ಸಮಯಕ್ಕಿರಲಿ ಎಂದು ಅನ್ಯತಾ ಖರ್ಚೂ ಮಾಡುತ್ತಿರಲಿಲ್ಲ.

"ಇನ್ನೊಂದು ಐನೂರು ರೂಪಾಯಿಗಳಿದ್ದಿದ್ದರೆ ಒಂದು ಕ್ಯಾಮೆರಾ ಕೊಂಡುಕೊಳ್ಳಬಹುದಿತ್ತು" ಎಂದು ನನ್ನ ಬಳಿ ಹಲವಾರು ಸಲ ಪೇಚಾಡಿಕೊಂಡ. ನಾನೂ ಹೌದೆಂದಿದ್ದೆ.

ಆದರೆ ನನ್ನ ಬಳಿ ದೆಹಲಿಯಲ್ಲಿ ನನ್ನ ಕಂಪನಿಯ ಎಂ.ಡಿ ಕೊಟ್ಟಿದ್ದ ೧೨೦೦ ರೂಪಾಯಿಗಳಿತ್ತು. ಆದರೆ ನಾನದನ್ನು ಬಳಸಲು ಸಿದ್ಧನಿರಲಿಲ್ಲ. ಏಕೆಂದರೆ ಅದನ್ನು ಬೆಂಗಳೂರಿಗೆ ಹಿಂದಿರುಗಿದ ಮೇಲೆ ಹಿಂದಿರುಗಿಸಬೇಕೆಂದು ನಿರ್ಧರಿಸಿದ್ದೆ, ಬಳಸಿಬಿಟ್ಟರೆ ಅಷ್ಟು ದುಡ್ಡು ಮತ್ತೆ ಹೊಂದಿಸುವುದು ಹೇಗೆ?

ಮುಂದಿನ ಪುಟ ನೋಡಿ ...

ಆ ದುಡ್ಡು ನನಗೆ ಸಾಲದಂತೆ ಅನ್ನಿಸುತ್ತಿತ್ತು. ಕ್ಯಾಮೆರಾಗಿಂತಲೂ ತುರ್ತಿನ ಪರಿಸ್ಥಿತಿಯೇನಾದರೂ ಬಂದರೆ ಬಳಸಬಹುದೇ ವಿನಹ, ಬೇರೆ ಕಾರಣಗಳಿಗೆ ಬಳಸಲು ನನಗೆ ಇಷ್ಟವಿರಲಿಲ್ಲ. ಹಾಗಾಗಿ ನನ್ನ ಬಳಿ ಹೆಚ್ಚಿನ ಹಣವಿದೆಯೆಂಬ ವಿಷಯವನ್ನು ನನ್ನಣ್ಣನಿಗೆ ತಿಳಿಸಲಿಲ್ಲ.
ಬೆಂಗಳೂರಿಗೆ ಬಂದ ನಂತರ ನಮ್ಮ ಎಂ.ಡಿ. ಗೆ ಹಿಂದಿರುಗಿಸಲು ಹೋದಾಗ, ಅವರು "ಅದನ್ನು ಕಂಪನಿಯ ಲೆಕ್ಕಕ್ಕೆ ಬರೆದು ಕೊಳ್ಳುತ್ತೇನೆ, ಒಂದು ಪತ್ರ ಬರೆದು ಕೊಟ್ಟುಬಿಡು, ಆ ಹಣ ನೀನೆ ಇಟ್ಟುಕೋ" ಎಂದರು!!
ಹೀಗಾಗುತ್ತೆ ಅಂತ ಅನ್ನಿಸಿದ್ದಿದ್ದರೆ ಕ್ಯಾಮೆರಾ ಕೊಳ್ಳಬಹುದಿತ್ತೇನೋ ಅನ್ನುಸ್ತು ಆವಾಗ! ಇನ್ನು ಈ ವಿಷಯನೆಲ್ಲಾ ಹೇಳಿದ್ರೆ ನಮ್ಮಣ್ಣನಿಂದ ಬೈಸಿಕೊಳ್ಳೋದು ಖಂಡಿತ ಅಂತ್ಹೇಳಿ, ಆ ವಿಷಯ ಇದುವರೆವಿಗೂ ಗೌಪ್ಯವಾಗಿಯೇ ಉಳಿದು ಹೋಗಿತ್ತು!!.

ಹಿರಿಯರ ನುಡಿ, ಸಾಹಸದ ಮತ್ತೊಂದು ಮುಖ: ನಮ್ಮೆದುರಿನ ಮನೆಯಲ್ಲಿ, ನಮ್ಮ ತಂದೆಯವರಷ್ಟೇ ವಯಸಾಗಿದ್ದ ನನ್ನ ಆಪ್ತರೊಬ್ಬರಿದ್ದರು. ಅವರು ದಿನವೂ ಸಂಜೆಯ ವೇಳೆ, ಅವರ ಮನೆಯ ಮುಂದೆ ನನ್ನನ್ನು ಕೂಡಿಸಿಕೊಂಡು ಮಾತನಾಡಿಸುತ್ತಿದ್ದರು. ನನಗೆ ಸ್ನೇಹಿತರು, ಹಿತಚಿಂತಕರಂತೆ ಇದ್ದರು. ನಾವು ಪ್ರವಾಸ ಹೊರಟಾಗ ಅವರು ಊರಿನಲ್ಲಿರಲಿಲ್ಲ. ನಾವು ಹಿಂದಿರುಗಿದ ಮೇಲೆ, ಎಂದಿನಂತೆ ನನ್ನೊಡನೆ ಮಾತನಾಡಲು ಕುಳಿತಾಗ " ಅಲ್ಲ, ನೀನು, ಗಣೇಶ ಮಾಡಿದ್ದು, ಸರೀನಾ? ಸಾಹಸ ಏನೋ ಮಾಡಿದ್ದೀರ, ಮೆಚ್ಚಬೇಕಾದ್ದೆ, ಆದರೆ ಹೊರಡುವ ಮೊದಲು ನಿಮ್ಮ ತಾಯ್ತಂದೆಯರ ಬಗ್ಗೆ ಒಮ್ಮೆ ಯೋಚನೆ ಮಾಡಿದಿರಾ?" ಎಂದರು. ನನಗೆ ಅರ್ಥವಾಗಲಿಲ್ಲ. ಮತ್ತೆ ಹೇಳಿದರು " ಇರುವ ಇಬ್ಬರು ಗಂಡು ಮಕ್ಕಳೂ ಹೀಗೆ ಸಾಹಸ ಎಂದು ತಿಂಗಳಾನುಗಟ್ಟಲೆ, ಸಾವಿರಾರು ಮೈಲಿಗಳ ದೂರ ಸೈಕಲ್ ಮೇಲೆ ಹೋಗಿಬಿಟ್ಟರೆ, ಅವರಿಬ್ಬರೂ ನಿಮ್ಮ ಬಗ್ಗೆ ದಿನ ನಿತ್ಯ ಎಷ್ಟು ಕೊರಗಿರಬಹುದು ಯೋಚಿಸಿದ್ದೀರಾ? ನಿಮ್ಮ ಅಣ್ಣ ತೀರಿಕೊಂಡ ದುಃಖವೇ ಅವರಿಗಿನ್ನೂ ಆರಿಲ್ಲ, ಇನ್ನು ನಿಮಗೆ ಏನಾದರೂ ಹೆಚ್ಚು ಕಡಿಮೆಯಾಗಿದಿದ್ದರೆ, ಅವರ ಗತಿ ಏನಾಗಿರುತ್ತಿತ್ತು. ಇನ್ನು ಮೇಲೆ ಇಂತಹ ಹುಚ್ಚು ಸಾಹಸಗಳನ್ನು ಮಾಡಬೇಡಿ" ಎಂದರು. ಐದು ಮಕ್ಕಳ ತಂದೆಯಾದ ಅವರ ಮಾತುಗಳಲ್ಲಿದ್ದ ಕಟು ಸತ್ಯ, ನನಗಾಗರಿವಾಯಿತು. ನನ್ನಲ್ಲಿ ತಪ್ಪಿತಸ್ಥ ಮನೋಭಾವಮೂಡಿತು.

೩೨ ವರ್ಷವಾಗಿದ್ದ ನಮ್ಮ ದೊಡ್ಡಣ್ಣ, ಆಕಸ್ಮಿಕವಾಗಿ ತೀರಿಕೊಂಡು ಇನ್ನೂ ಒಂದೂವರೆ ವರ್ಷಗಳಾಗಿತ್ತಷ್ಟೆ. ಅದು ನಮ್ಮೆಲ್ಲರಿಗೂ ದೊಡ್ಡ ಆಘಾತ. ನಮ್ಮ ತಂದೆ ತಾಯಿಯರಂತೂ ಸಾಕಷ್ಟು ಹಣ್ಣಾಗಿ ಹೋಗಿದ್ದರು. ಆದರೂ ಯಾವುದೇ ವಿರೋಧ ವ್ಯಕ್ತ ಪಡಿಸದೆ ನಮ್ಮನ್ನು ಕಳುಹಿಸಿಕೊಟ್ಟಿದ್ದರು.

ಕರ್ನೂಲಿನ ಬಳಿ ಹೋಗುವಾಗ ರಸ್ತೆಬದಿಯಲ್ಲಿ ಕಳ್ಳೆಕಾಯಿ ಮಾರುತ್ತಿದ್ದ ಅಜ್ಜಿಯೊಬ್ಬಳೂ ಹೀಗೇ ಹೇಳಿದ್ದಳು, "ಅಲ್ರಪ್ಪಾ, ನೀವೇನೋ ಸೈಕಲ್ಲು, ಡೆಲ್ಲಿ ಅಂತೆಲ್ಲಾ ಊರೂರು ಸುತ್ತುತ್ತೀರ, ಆದ್ರೆ ಮನೇನಲ್ಲಿ, ನಿಮ್ಮಪ್ಪ ಅಮ್ಮ, ಹೆಂಗೆ ನಿಮಗೋಸ್ಕರ ಹಗ್ಲೂ ರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾಯ್ತಿರ್ತಾರೆ ಅಂತೇನಾದ್ರೂ ಯೊಚ್ನೆ ಇದ್ಯಾ ನಿಮ್ಗೆ" ಅಂದಿದ್ದಳು. ನಂತರ ಒಂದು ದಿನ ನನ್ನಮ್ಮನನ್ನು ಕೇಳಿದೆ " ನಿನಗೆ ಭಯ, ಯೋಚ್ನೆ ಆಗಲಿಲ್ಲವಾ, ನಮ್ಮನ್ನು ಕಳುಹಿಸೋದು ಬೇಡ ಅಂತನ್ನಿಸಲಿಲ್ವಾ" ಅದಕ್ಕೆ ನನ್ನಮ್ಮ ಹೇಳಿದ್ದು, " ನೋಡು ಶೈಲೇಶು, ನಾವು ಬೇಡ ಅಂದ್ರೂ, ಬೇಕೂ ಅಂದ್ರೂ ನಡೆಯೋದು ನಡಿತಾನೆ ಇರುತ್ತೆ, ಹೀಗಾಗ್ಬೇಕು ಅಂತಿರೋದ್ದನ್ನ ಯಾರಿಂದಾನೂ ತಪ್ಸಕ್ಕಾಗಲ್ಲ ಯಾವ್ದಕ್ಕೂ ಹೆದ್ರಕೊಂಡು, ಯೋಚ್ನೆ ಮಾಡ್ಕೊಂಡು ಕೂತ್ರೆ ಏನೂ ಉಪಯೋಗ ಇಲ್ಲ, ಚಿಂತೆ ಮಾಡಿದಷ್ಟು ನಮ್ಮ ಆರೋಗ್ಯ, ನೆಮ್ಮದಿ ಹಾಳು ಮಾಡಿಕೊಳ್ತೀವಷ್ಟೆ".

ಸೈಕಲ್ ಹತ್ತುವುದೇ ಒಂದು ಸಾಹಸ: ಒಂದು ಮೋಜಿನ ಸಂಗತಿಯೆಂದರೆ, ನಾನು ಪ್ರವಾಸಕ್ಕಾಗಿ ನನ್ನ ಸ್ನೇಹಿತನಿಂದ ಒಂದು B S A ಸೈಕಲ್ ಎರವಲು ಪಡೆದಿದ್ದೆ. ಅದು ತುಂಬಾ ಹಗುರವಾಗಿತ್ತು. ಐವತ್ತು ದಿನಗಳಿಗೆ, ಛಳಿ ತಡಯಲೆಂದು, ಇಟ್ಟುಕೊಂಡಿದ್ದ ಬೆಚ್ಚನೆಯ ಬಟ್ಟೆಗಳು, ಒಂದೆರಡು ಕಂಬಳಿಗಳು ಎಲ್ಲವೂ ಸೇರಿ ಇಬ್ಬರದೂ ಸಾಕಷ್ಟು ದೊಡ್ಡ ದೊಡ್ಡ ಏರ್ ಬ್ಯಾಗುಗಳೇ ಇದ್ದವು. ಹಿಂದಿರುಗಿ ಬರುವಾಗ, ದೆಹಲಿ, ಜೈಪುರಗಳಲ್ಲಿ, ಉಡುಗೊರೆಗೆಂದು ಕೊಂಡ ಶಾಲುಗಳು, ಸ್ವೆಟರ್ ಗಳು, ಸೀರೆಗಳು ಬೇರೆ. ಅದನ್ನು ಸೈಕಲ್ ಕ್ಯಾರಿಯರ್ ಮೇಲಿರಿಸಿ, ಹಗ್ಗಗಳಿಂದ ಕಟ್ಟಿಕೊಳ್ಳುವುದೇ ದಿನವೂ ಒಂದು ದೊಡ್ಡ ಕೆಲಸವಾಗುತ್ತಿತ್ತು. ಅವಶ್ಯಕತೆ ಇಲ್ಲದಿದ್ದರೆ ನಾವದನ್ನು ಇಳಿಸಲು ಹೋಗುತ್ತಲೇ ಇರಲ್ಲಿಲ್ಲ.
ಹಿಂದೆ ಕ್ಯಾರಿಯರ್ ಮೇಲೆ ಸಾಕಷ್ಟು ಎತ್ತರಕ್ಕೆ ಕುಳಿತಿರುತ್ತಿದ್ದ, ಆ ಬ್ಯಾಗಿಗಿಂತಲೂ ಎತ್ತರಕ್ಕೆ ಕಾಲೇರಿಸಿ, ಸೈಕಲ್ ಹತ್ತುವುದೇ ನನಗೆ ಒಂದು ದೊಡ್ಡ ಸಾಹಸವಾಗಿ ಬಿಡುತ್ತಿತ್ತು. ದೇಶವನ್ನೆಲ್ಲಾ ಸೈಕಲ್ ಮೇಲೆ ಸುತ್ತುತ್ತಿದ್ದರೂ, ಪೆಡಲ್ ಮಾಡಿಕೊಂಡು ಸೈಕಲ್ ಹತ್ತುವುದನ್ನು ನಾನು ಕಲಿಯಲಿಲ್ಲ. ಹಾಗಾಗಿ ನಾನು ಸೈಕಲ್ ಹತ್ತಲು, ಯಾವುದಾದರೂ ಜಗುಲಿಯೋ, ಮೆಟ್ಟಿಲೋ ಇರುವ ಸ್ಥಳ ಹುಡುಕುತ್ತಿದ್ದೆ. ಮತ್ತೂ ತಮಾಷೆಯೆಂದರೆ, ಆ ಸಮಯಗಳಲ್ಲಿ, ಸೈಕಲ್ಲಿನ ಹಿಂಬಾರ ಹೆಚ್ಚಾಗಿ, ಸಮತೋಲನ ತಪ್ಪಿ, ಮುಂದಿನ ಚಕ್ರ ಮೇಲಕ್ಕೆತ್ತಿಕೊಂಡು, ಸೈಕಲ್ ಸಮೇತ ನಾನೂ ಕೆಳಗ ಬೀಳುತ್ತಿದ್ದೆ. ಆಗ ನನ್ನಣ್ಣ " ಇವನೊಬ್ಬ,ಇಷ್ಟು ದಿನ ಆದ್ರು ಒಂದ್ ಸೈಕಲ್ ಹತ್ತೋದ್ ಕಲ್ತಿಲ್ಲ" ಅಂತ ಬೈಯುತ್ತಾ ಸಹಾಯಕ್ಕೆ ಬರುತ್ತಿದ್ದ.

ಕೆಲವು ಅಂಕಿ ಅಂಶಗಳು

ಸೈಕಲ್ ತುಳಿದ ಒಟ್ಟು ದೂರ = ಸುಮಾರು ೪೫೦೦ ಕಿಲೋ ಮೀಟರ್ ಗಳು. ತೆಗೆದುಕೊಂಡ ಸಮಯ = ೪೫ ದಿನಗಳು. ಒಂದು ದಿನದಲ್ಲಿ ತುಳಿದ ಅತಿ ಹೆಚ್ಚು ದೂರ = ೧೬೦ ಕಿಲೋ ಮೀಟರ್, ಅತಿ ಕಡಿಮೆ ದೂರ = ೫೫ ಕಿಲೋ ಮೀಟರ್. ಪಯಣಿಸಿದ ರಾಜ್ಯಗಳು = ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಹರಿಯಾಣ, ರಾಜಾಸ್ಥಾನ. ಎಷ್ಟು ಸುತ್ತಿದ್ದರೂ, ಹಲವು ಜಾಗಗಳು ಮನದಲ್ಲಿ ಅಳಿಯದ ನೆನಪನ್ನುಳಿಸಿವೆ, ಅವುಗಳಲ್ಲಿ ಕೆಲವು.:

ಮುಂದಿನ ಪುಟ ನೋಡಿ ...

ಕರ್ನಾಟಕ	ಚಿತ್ರದುರ್ಗದ ಕೋಟೆ, ಬಿಜಾಪುರದ ಗೋಲ್ ಗುಂಬಜ್
ಉತ್ತರಪ್ರದೇಶ	ಝಾನ್ಸಿ ಅವಶೇಷಗಳು, ಆಗ್ರಾದ ಕೋಟೆ, ಹರಿದ್ವಾರದ ಗಂಗೆ, ದೆಹಲಿಯ ಬಹಾಯಿ ಮಂದಿರ.
ರಾಜಾಸ್ಥಾನ	ಅರಾವಳಿ ಪರ್ವತಶ್ರೇಣಿ, ಜಯಪುರ್ ನಗರ,
ಮಧ್ಯಪ್ರದೇಶ	ನರ್ಮದಾ ನದಿತೀರ.
ಮಹಾರಾಷ್ಟ್ರ	ಬೀಬಿ ಕಾ ಮುಕಾಬ್ರ, ಕನ್ನಡ್ ಘಾಟ್.

ಆದರೆ ಎಲ್ಲಕ್ಕಿಂತ ಹೆಚ್ಚಿನ ಪರಿಣಾಮ ಬೀರಿದ್ದೆಂದರೆ, ನಮ್ಮ ಪಯಣದುದ್ದಕ್ಕೂ ಕಂಡು ಕೇಳರಿಯದ ಸ್ಥಳಗಳಲ್ಲಿ, ಅಪರಿಚಿತರಾದರೂ ನಮಗೆ ದೊರೆತ ಸತ್ಕಾರ,ನಮ್ಮೆಡೆಗೆ ಜನತೆ ತೋರಿದ ಮಾನವೀಯತೆ, ಪ್ರೀತಿ ವಿಶ್ವಾಸ, ಆದರ. ನೆನಪಿಸಿಕೊಂಡಾಗ ಇಂದಿಗೂ ಹೃದಯ ತುಂಬಿ ಬರುವ ಹಲವಾರು ಘಟನೆಗಳು.

ವಂದನೆಗಳು: ಅಬ್ಬ ಇದೆಲ್ಲ ನಡೆದು ಇಪ್ಪತ್ತೈದು ವರ್ಷಗಳಾದರೂ, ಇನ್ನೂ ಇಂದು ನೆನ್ನೆ ನಡೆದಂತೆ ನೆನಪುಗಳು ಹಸಿರಾಗಿದೆ. ಸುಖವಾಗಿ ಹಿಂದಿರುಗಿ ಬಂದು ಮನೆಯವರೆಲ್ಲರೊಡನೆ, ಮಲ್ಲೇಶ್ವರದ ಗಣೇಶನಿಗೆ ನಮಸ್ಕರಿಸಿ ಮನೆಗೆ ನಡೆದು ಬಂದದ್ದು ನೆನ್ನೆ ಸಂಜೆಯಂತಿದೆ. ಬರೆಯುತ್ತಾ ಹೋದಂತೆಲ್ಲ, ಆ ಚಿತ್ರಗಳು ಮನದಲ್ಲಿ ಮೂಡುತ್ತಿದೆ. ಇದು ನಡೆದದ್ದು ನಿಜವೆ, ನನ್ನಿಂದ ಇದು ಸಾಧ್ಯವಾಯಿತೇ, ಎಂದು ನನಗೆ ಆಶ್ಚರ್ಯವಾಗುತ್ತದೆ. ಜೀವನದಲ್ಲಿ ಏನೋ ಒಂದು ಸಾಧನೆ ಮಾಡಿದ ಹೆಮ್ಮೆ ಇದೆ. ಈ ಸಾಧನೆಗೆ ಪ್ರೇರೇಪಿಸಿದ, ಸಹಾಯ ಮಾಡಿದ, ಮತ್ತು ಈ ಬರವಣಿಗೆಗೆ ಪ್ರೇರೇಪಿಸಿದ, ಓದಿ ಅಭಿಪ್ರಾಯ ತಿಳಿಸಿ, ಉತ್ತೇಜಿಸಿದ ಎಲ್ಲರಿಗೂ ವಂದನೆಗಳು. ▪

ನೆನಪಿನ ಪಯಣ ಬರಹದಡಿ ಇದುವರೆವಿಗೂ ಶ್ರೀ ನಾಗಶೈಲ ಕುಮಾರ್ ಅವರು ಭಾರತದಲ್ಲಿ ಕೈಗೊಂಡಿದ್ದ ತಮ್ಮ ಸೈಕಲ್ ಪಯಣವನ್ನು ಬಹಳ ಆತ್ಮೀಯತೆಯಿಂದ "ಹೊರನಾಡ ಚಿಲುಮೆ" ಓದುಗ ಬಳಗದವರೊಂದಿಗೆ ಹಂಚಿಕೊಂಡಿದ್ದಾರೆ. ಬಹಳ ಮುತುವರ್ಜಿಯಿಂದ ಪ್ರತೀಸಂಚಿಕೆಗೆ ಬರಹವನ್ನು ಕೊಟ್ಟು, ತೆರೆದ ಮನದಿಂದ ಓದುಗರ ಮೆಚ್ಚುಗೆ, ಅಭಿಪ್ರಾಯಗಳನ್ನು ಸ್ವೀಕರಿಸಿದ್ದಾರೆ.
ಇವರಿಗೆ ಚಿಲುಮೆ ಸಂಪಾದಕೀಯ ಸಮಿತಿಯು ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತದೆ ...

ಮಹಾವೀರಾಚಾರ್ಯ ಮತ್ತು ಗಣಿತಸಾರಸಂಗ್ರಹ – ಇದರಲ್ಲಿ ಕೇಳಲಾದ ಲೆಕ್ಕಗಳಿಗೆ ಉತ್ತರ

೧. **ಸೂತ್ರ:** ಪ್ರತಿಯೊಂದು ಭಾಗವನ್ನೂ ಒಂದರಿಂದ (1) ಕಳೆದು, ಬಂದ ಸಂಖ್ಯೆಗಳನ್ನು ಒಟ್ಟಿಗೆ ಗುಣಿಸಬೇಕು, ಈ ಗುಣಲಬ್ಧದಿಂದ ಶೇಷವನ್ನು ಭಾಗಿಸಿದರೆ ಒಟ್ಟು ರಾಶಿ ಎಷ್ಟೆಂದು ತಿಳಿಯುತ್ತದೆ.

$[1- (1/6)] \times [1-(1/5)] \times [1-(1/4)] \times [1-(1/3)] \times [1-(1/2)] = (1/6)$

ಆದ್ದರಿಂದ ಒಟ್ಟು ರಾಶಿಯಲ್ಲಿದ್ದ ಹಣ್ಣುಗಳು = $3 / (1/6) =$ **18**.

ಕುತೂಹಲಕಾರಿ ಪ್ರಶ್ನೆ: ಪ್ರತಿಯೊಬ್ಬರಿಗೂ ಎಷ್ಟೆಷ್ಟು ಹಣ್ಣುಗಳು ಬಂದುವು?

೨. **ಸೂತ್ರ:** ಇಬ್ಬರ ವೇಗಗಳ ವರ್ಗಗಳನ್ನೂ ಕೂಡಿ; ಬಂದ ಸಂಖ್ಯೆಯನ್ನು ಈ ವರ್ಗಗಳ ವ್ಯತ್ಯಾಸದಿಂದ ಭಾಗಿಸಿ. ಬಂದ ಭಾಗಲಬ್ಧವನ್ನು ಉತ್ತರ ದಿಕ್ಕಿನಲ್ಲಿ ಚಲಿಸಿದ ದಿನಗಳಿಂದ ಗುಣಿಸಿದರೆ **ಕರ್ಣದ (hypotenuse) ದಿಕ್ಕಿನಲ್ಲಿ ನಡೆದ ದಿನಗಳ** ಸಂಖ್ಯೆ ದೊರಕುವುದು.

$[3^2 + 2^2] / [3^2 - 2^2] = 13/5$

ಕರ್ಣದ ದಿಕ್ಕಿನಲ್ಲಿ ನಡೆದ ದಿನಗಳು: $(13/5) \times 5 =$ **13**

ಒಟ್ಟು ದಿನಗಳು: $5 + 13 = 18$



ರಜನಿ – ನಮ್ಮ ಮನೆಯ ಹೂವು

ಸ್ಮಿತಾ ಮೇಲ್ಕೋಟೆ



ನಮ್ಮ ಮನೆ ಅಂಗಳದ ಹೂವೊಂದು ಹಾರಿ ಹೋಗಿ ಬಿದ್ದು ಅಲ್ಲಿಂದಲೇ ಎಲ್ಲರಿಗೂ ಪರಿಮಳ ಬೀರುತಿದೆ. ಯಾವ ಹೂವು ಏನು ಪರಿಮಳ, ಎಲ್ಲಿಂದ ಬಂದಿದ್ದು ಅಂತ ಯೋಚಿಸಿತ್ತಾ ಇದ್ದೀರಾ ? ನಾನು ಹೇಳುತ್ತಾ ಇರುವ ಒಬ್ಬ ಸರಳ ವ್ಯಕ್ತಿ ಶಿವಾಜಿ ರಾವ್ ಗಾಯಕ್ವಾಡ್. ಹೆಸರು ಎಲ್ಲಿಯೂ ಕೇಳಿಲ್ಲ ಅಂದ್ರಾ ? ಈಗಿನ ಸೂಪರ್ ಸ್ಟಾರ್ ರಜನಿಕಾಂತ್ ಎಂಬ ಹೆಸರನ್ನು ಕೇಳದೆ ಇರುವುದಿಲ್ಲಾ ಮತ್ತು ಅವರ ಚಿತ್ರಗಳನ್ನು ನೋಡದೇ ಇರದ ಯಾರೂ ಇಲ್ಲ.

ಕರ್ನಾಟಕದಲ್ಲೇ ಹುಟ್ಟಿ ತಮಿಳುನಾಡಿನ ಜನಕ್ಕೆ ದೇವರಿಗೆ ಸಮಾನ ಎಂಬ ರೀತಿ ಮನೆಮಗನಾಗಿರುವ ರಜನಿಕಾಂತ್ ಕನ್ನಡಮ್ಮನ ಮಗ ಎಂದರೆ ಆಶ್ಚರ್ಯ, ಸಂತೋಷ ಒಟ್ಟಿಗೇ ಆಗುತ್ತದೆ. ಕರ್ನಾಟಕದಲ್ಲೇ ಹುಟ್ಟಿದರೂ ಮನೆಭಾಷೆ ಮರಾಠಿ. ನಮ್ಮ ಕರ್ನಾಟಕದ ರಾಜಧಾನಿಯಲ್ಲಿ ಒಂದಾನೊಂದು ಕಾಲದಲ್ಲಿ ಸೂಪರ್ ಸ್ಟಾರ್ ರಜನಿ ಕಂಡಕ್ಟರ್ ಕೆಲಸ ಮಾಡುತಿದ್ದರು ಎಂದರೆ ಮೂಗಿನ ಮೇಲೆ ಬೆರಳಿಡುವ ವಿಷಯವೇ ಸರಿ.

ಬೆಂಗಳೂರಿನಲ್ಲಿ ಕಂಡಕ್ಟರ್ ಕೆಲಸ ಮಾಡುವ ಸಮಯದಲ್ಲಿ ರಜನಿಕಾಂತ್ ತಮ್ಮನ್ನು ವಿವಿಧ ನಾಟಕಗಳಲ್ಲಿ ತೊಡಗಿಸಿಕೊಂಡರು. ಅಲ್ಲಿಂದ ಮುಂದೆ ಅವರ ನಟನಾ ಪಯಣ ೧೯೭೫ ರಲ್ಲಿ ಒಂದು ಚಿಕ್ಕ ಪಾತ್ರದಿಂದ ಶುರು. ನಂತರ ರಜನಿಕಾಂತ್ ಮಾಡದೆ ಇರುವ ಪಾತ್ರವೇ ಇಲ್ಲ. ಕೂಲಿ, ಹಾಲು ಮಾರುವವನು, ಆಟೋ ಚಾಲಕ, ಖಳನಾಯಕ. ರಜನಿಯವರ ಹಾವ ಭಾವ, ನಡೆ ನುಡಿ, ಹಾಸ್ಯ ಪಾತ್ರಗಳಲ್ಲಿ ಅವರು ಪಾತ್ರದೊಂದಿಗೆ ಒಂದಾಗುವ ರೀತಿ ಎಲ್ಲರನ್ನು ದಂಗು ಬಡಿಸುತ್ತದೆ. ಇಡೀ ತಮಿಳುನಾಡಿನ ಚಿತ್ರಪ್ರಪ್ರಂಚದ ಬಿರುಗಾಳಿ ಎಂದೇ ಹೇಳಬಹುದು. ೧೯೭೮ ರಲ್ಲಿ ಒಂದು ಕನ್ನಡದ ಕಥಾಸಂಗಮ (ಪುಟ್ಟಣ್ಣ ಕಣಗಾಲ್ ನಿರ್ಮಿಸಿದ) ಚಿತ್ರದಲ್ಲಿ ಅಭಿನಯಿಸಿದ್ದರು.

ರಜನಿಯವರಿಗೆ ಮೊದಲು ಅವಕಾಶ ಕೊಟ್ಟ ನಿರ್ದೇಶಕ K. ಬಾಲಚಂದರ್. ಹೊಸ ಪ್ರತಿಭೆಗಳನ್ನ ಪರಿಚಯಿಸುವುದರಲ್ಲಿ ಎತ್ತಿದ ಕೈ. ರಜನಿಯ ವ್ಯಕ್ತಿತ್ವವೇ ಸಿನಿಮಾಗೋಸ್ಕರ ಮಾರ್ಪಾಡಾಯಿತು. ಪ್ರತಿಯೊಂದು ಚಿತ್ರವೂ ಸೂಪರ್ ಹಿಟ್. ಚಿತ್ರದ ಮೇಲೆ ಹಾಕಿದ್ದ ಹಣ ನಿರೀಕ್ಷೆಗಿಂತ ಮೀರಿ ಬಂದಾಗ, ರಜನಿಯವರ ಗ್ರಾಫ್ ಇನ್ನೂ ಉತ್ತುಂಗಕ್ಕೇರಿತು. ರಜನಿಗೊಸ್ಕರ ಕಥೆ, ಚಿತ್ರಕಥೆ, ಹಾಡು ಹಾಸ್ಯ, ಸಂಭಾಷಣೆ ಪ್ರಾರಂಭವಾಯಿತು. ಜನ ಹುಚ್ಚೆದ್ದು ಅವರನ್ನು ಮೆಚ್ಚತೊಡಗಿದರು. ರಜನಿಯವರ ಚಿತ್ರಗಳು ಭಾರತದಲ್ಲಿ ಮಾತ್ರವಲ್ಲದೇ ಹೊರ ದೇಶಗಳಲ್ಲೂ ಬಿಡುಗಡೆ ಆಗತೊಡಗಿದವು. ತಮಿಳು ಎಂದರೆ ಏನು ಎಂದರಿಯದ ಜಪಾನ್ ದೇಶದಲ್ಲಿ ರಜನಿ ಜನಪ್ರಿಯ ಎಂದರೆ ವಿಸ್ಮಯದ ವಿಷಯ.

ಇಷ್ಟು ದೊಡ್ಡ ಮೇರುನಟ ತಮಿಳಿನಲ್ಲಿ ಮಾತ್ರ ದೊಡ್ಡ ಸ್ಥಾನಮಾನ ಪಡೆದುಕೊಂಡ. ಬೇರೆ ಭಾಷೆಗಳಲ್ಲಿ ಅಭಿನಯಿಸಿದ್ದು ಬಹಳ ಕಮ್ಮಿ. ಹಿಂದಿಯ ಮೇರುನಟ ಅಮಿತಾಬ್ಬಚ್ಚನ್ ಜೊತೆ ಕೂಡ ಒಂದು ಚಿತ್ರ ಮಾಡಿದ್ದಾರೆ. ತಮಿಳುನಾಡಿನ ಜನತೆ ಪ್ರೀತಿಯಿಂದ "ತಲೈವರ್" ಎಂದು ಬಿರುದು ಕೊಟ್ಟಿದ್ದಾರೆ. ಬಿರುದು ಪ್ರಶಸ್ತಿಗಳಿಗೆ ಲೆಕ್ಕವಿಲ್ಲ ಆದರೂ ಕೂಡ ನಿಗರ್ವಿ, ಸರಳ ವ್ಯಕ್ತಿ. ಇಷ್ಟು ಜನಪ್ರಿಯವಾದ ಮನುಷ್ಯ ಯಾಕೋ ರಾಜಕೀಯದ ಒಳಗೆ ಕಾಲಿಟ್ಟಿಲ್ಲ. ಇರುವುದರಲ್ಲಿ ತೃಪ್ತಿ ಪಡೆದ ವ್ಯಕ್ತಿ.

ಇತ್ತೀಚೆಗೆ ಬಿಡುಗಡೆಯಾದ ಚಿತ್ರವೊಂದರಲ್ಲಿ ರಜನಿಯವರನ್ನು ೨೫ ವರ್ಷದ ನವಯುವಕನ ಹಾಗೆ ಮಾಡಿದ ಅನಿಮೇಷನ್ ಚಿತ್ರಕ್ಕೂ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಈ ಚಿತ್ರ ನಿರ್ಮಿಸಿದ್ದು ಸ್ವತಃ ರಜನಿ ಅವರ ಮಗಳೇ. ಬಿಡುಗಡೆಯ ಸಮಾರಂಭದಲ್ಲಿ ಹಿಂದಿಯ ಸೂಪರ್ ನಟ ಅಮಿತಾಭ್ ಅವರು ಮಾತಾಡುತ್ತಾ, ರಜನಿಯವರ ಚಿತ್ರವನ್ನು ಎರೆಡೆರಡು ಸಾರಿ ನೋಡಬೇಕು, ಏಕೆಂದರೆ ಮೊದಲ ಸಲ ಜನ ಹೊಡಿಯುವ ಸಿಳ್ಳೆ, ಉತ್ಸಾಹದ ಆರ್ಭಟದಲ್ಲಿ ಸಂಭಾಷಣೆಗಳು ಕೇಳುವುದಿಲ್ಲ ಎಂದರು. ನೆನ್ನೆ ಕಂಡಕ್ಟರ್ ಆಗಿದ್ದೆ, ಇಂದು ಸೂಪರ್ ಸ್ಟಾರ್, ನಾಳೆ ಏನೋ ತಿಳಿಯದು ಎಂದು ವಿನಯಪೂರಕವಾಗಿ ನುಡಿಯುತ್ತಾರೆ. ಇಂತಹ ಮನುಷ್ಯ ಬಹಳ ಅಪರೂಪ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಜಾಣ ಕರ್ನಾಟಕ – ಉತ್ತರ

೧. ಮೈಸೂರು ಅರಸರು

೨ ಮಿತ್ರವಿಂದ ಗೋವಿಂದ (ರಚನೆ 1680)

ಮತ್ತಷ್ಟು ಚಿಲುಮೆ ...

ಕ್ಲಿಕ್: ರೇಖ ಶಶಿಕಾಂತ್

ಚಿತ್ರಕ್ಕೊಂದು ಕಾವ್ಯ

ರೇಖ ಶಶಿಕಾಂತ್, ಸಿಡ್ನಿ

ಇಗೋ ಮತ್ತೊಮ್ಮೆ ನೋಡಬಂದೆ
ನಿನ್ನನು ಹಾರ್ಬರ್ ಸೇತುವೆ
ಸುಂದರ ಸಿಡ್ನಿಯ ವೈಶಿಷ್ಟ್ಯವಾಗಿ
ಅಗೋ ಅಲ್ಲಿ ಬೃಹತ್ತಾಗಿ ನಿಂತಿರುವೆ

ಒಂದೊಂದು ದಿಕ್ಕಿನಲ್ಲೂ ಒಂದೊಂದು ರೀತಿ
ವಿಭಿನ್ನವಾಗಿ ನನ್ನ ಕಣ್ಣಿಗೆ ಕಾಣುವೆ
ಧೂಳು ಗಲಭೆಗಳ ಮಧ್ಯೆ ನನಗೆ
ದಿನನಿತ್ಯ ತಂಗಾಳಿ, ಶಾಂತತೆಯ ತರುವೆ

ಅಯ್ಯೋ ಯಾರ ದೃಷ್ಟಿ ತಾಗುವುದೋ ನಿನಗೆ
ಎಂದು ಸದಾ ಚಿಂತಿಸುವೆ
ವನವೃಕ್ಷಗಳ ನಡುವಣ ನೀನೆನ್ನ
ನೇತ್ರಗಳಿಗೆ ಸದಾ ಮುದ ನೀಡುವೆ ▪

ಜೀವನವನ್ನು ಸಮುದ್ರದಂತೆ ಭಾವಿಸು
ನಿನ್ನ ಹೃದಯವೇ ಸಮುದ್ರದ ದಂಡೆ
ನಿನ್ನ ಸ್ನೇಹಿತರೇ ಅಲೆಗಳು
ಸಮುದ್ರದಲ್ಲಿ ಎಷ್ಟು ಅಲೆಗಳಿವೆ ಎನ್ನೋದು ಮುಖ್ಯವಲ್ಲ
ಎಷ್ಟು ಅಲೆಗಳು ದಡವನ್ನ ಅಪ್ಪಿದವು ಎನ್ನೋದು

==========

ನಿನ್ನ ಸ್ನೇಹಿತನನ್ನು ಹೂವಿನಂತೆ ಪ್ರೀತಿಸಬೇಡ
ಏಕೆಂದರೆ ಹೂವು ಬೇಗ ಬಾಡುತ್ತದೆ
ಸ್ನೇಹಿತನನ್ನು ನದಿಯಂತೆ ಪ್ರೀತಿಸು
ಏಕೆಂದರೆ ನದಿ ನಿರಂತರ ಹರಿಯತ್ತಿರುತ್ತದೆ

==========

ಗಣ್ಯವ್ಯಕ್ತಿಗಳನ್ನ ದೇವರೇ ಸೃಷ್ಟಿಸಿರುತ್ತಾನೆ
ಸಂತೋಷದ ಕ್ಷಣಗಳನ್ನು ದೇವರೇ ಆರಿಸಿರುತ್ತಾನೆ
ಆದರೆ
ನಿನ್ನಂತಹ ಅತ್ಯುತ್ತಮ ಸ್ನೇಹಿತರು ದೇವರ ಉಡುಗೊರೆ

==========

ನಕ್ಷತ್ರಗಳು ಒಟ್ಟಿಗೇ ಕಂಡರೂ
ಅವು ಬೇರೆ ಬೇರೆ
ನಿಜವಾದ ಸ್ನೇಹಿತರು ದಿನಗಟ್ಟಲೆ ಮಾತಾಡದಿದ್ದರೂ
ಅವರ ಹೃದಯಗಳು ಮಾತ್ರ ಬೆಸೆದುಕೊಂಡಿರುತ್ತವೆ

==========

ಸ್ನೇಹ ನುಡಿಗಳು

ಬೇಲೂರು ರಾಮಮೂರ್ತಿ

ಒಳ್ಳೆ ಸ್ನೇಹಿತರು ಒಬ್ಬರಿಗೊಬ್ಬರು
ಸಹಾಯಕರಾಗಿರುತ್ತಾರೆ
ಆತ್ಮೀಯ ಸ್ನೇಹಿತರು ಒಬ್ಬರನ್ನೊಬ್ಬರು ಅರ್ಥ
ಮಾಡಿಕೊಳ್ಳುತ್ತಾರೆ
ನಿಜವಾದ ಸ್ನೇಹಿತರು ಒಟ್ಟಿಗೇ ಇರುತ್ತಾರೆ, ನಿರಂತರವಾಗಿ

==========

ಸ್ನೇಹಿತರು ಎಂದರೆ ಒಂದು ರೀತಿ ಷೂ ಇದ್ದ ಹಾಗೆ
ಕೆಲವು ಬಿಗಿ ಕೆಲವು ಸಡಿಲ
ಆದರೂ ಅವು ನಮ್ಮ ನಡಿಗೆಗೆ ಸಹಾಯವಾಗಿರುತ್ತವೆ

==========

ನಾನು ಮಾತಾಡ್ತಿರ್ತೀನಿ ನೀನು ಕೇಳಿಸ್ಕೊಳ್ತಿರ್ತೀಯ
ಅದು ಒಳ್ಳೆಯ ಸ್ನೇಹ
ನೀನು ಮಾತಾಡ್ತಿರ್ತೀಯ ನಾನು ಕೇಳಿಸ್ಕೊಳ್ತಿರ್ತೀನಿ
ಅದು ಉತ್ತಮ ಸ್ನೇಹ
ನಾನು ಏನೂ ಮಾತಾಡುವುದೇ ಇಲ್ಲ ಆದರೆ ನೀನು ಅರ್ಥ
ಮಾಡ್ಕೊತೀಯ
ಅದು ಅತ್ಯುತ್ತಮ ಸ್ನೇಹ

ವಿಜ್ಞಾನ

ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ!

ಸಂಕಲನ: ಬದರಿ ತ್ಯಾಮಗೊಂಡ್ಲು

ಕೊರೆಯುವ ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ ಎಂದು ತಿಳಿದುಕೊಳ್ಳಲು ಈ ಪ್ರಯೋಗ ಮಾಡೋಣ.

ಬೇಕಾಗುವ ಸಾಮಗ್ರಿ:

4 ಲೋಟದಲ್ಲಿ (ಗಾಜು) ಸುಮಾರು 37 ಡಿಗ್ರಿ ಉಷ್ಣಾಂಶವಿರುವ ನೀರು (ಆರೋಗ್ಯವಂತ ಮನುಷ್ಯನ ತಾಪಮಾನ ಸುಮಾರು 37 ಡಿಗ್ರಿ)

4 ತರಹದ ಬಟ್ಟೆ ತುಂಡುಗಳು (ಉಣ್ಣೆ (wool), ಹತ್ತಿ, ನೈಲಾನ್, ಜಾಳಾದ ಬಟ್ಟೆ - ಬಟ್ಟೆಯ ತುಂಡು ಲೋಟ ಸುತ್ತುವಷ್ಟಿರಬೇಕು)

ಒಂದು ಥರ್ಮಾಮೀಟರ್

ವಿಧಾನ:

ಉಷ್ಣ ನೀರಿರುವ ಪ್ರತಿಯೊಂದು ಲೋಟಕ್ಕೂ ಒಂದೊಂದು ತರಹದ ಬಟ್ಟೆ ತುಂಡುಗಳನ್ನು ಸುತ್ತಿರಿ

ಸುಮಾರು 15-20 ನಿಮಿಷ ಸುಮ್ಮನೆ ಇರಲು ಬಿಡಿ

ನಂತರ ಪ್ರತಿಯೊಂದರ ಲೋಟದಲ್ಲಿ ಥರ್ಮಾಮೀಟರ್ ಇರಿಸುತ್ತ ತಾಪಮಾನ ಎಷ್ಟಿದೆಯೆಂದು ನೋಡಿ

ಏನಾಗುತ್ತದೆ:

ಉಣ್ಣೆಯಿಂದ ಆವೃತವಾದ ಲೋಟದ ನೀರಿನ ತಾಪಮಾನ ಮಿಕ್ಕೆಲ್ಲವುದಕ್ಕಿಂತ ಹೆಚ್ಚಿರುತ್ತದೆ. ಏಕೆಂದರೆ ಉಣ್ಣೆಯ ಎಳೆಗಳು ಹೆಚ್ಚು ಒತ್ತೊತ್ತಾಗಿ ಹೆಣೆಯಲ್ಪಟ್ಟಿರುತ್ತದೆ. ಉಷ್ಣತೆಯು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಜಾಗವೇ ಇರುವುದಿಲ್ಲ. ಹೀಗಾಗಿ ಲೋಟದ ನೀರಿನಲ್ಲಿನ ಉಷ್ಣತೆಯನ್ನು ಹಾಗೆ ಹಿಡಿದಿಟ್ಟುಕೊಂಡಿರಲು ಸಾಧ್ಯವಾಗುತ್ತದೆ.

ಇದೇ ನಿಯಮದಡಿ, ನಾವುಗಳು ಉಣ್ಣೆಯಿಂದ (wool) ಮಾಡಿದ ಬಟ್ಟೆಗಳನ್ನು ಹಾಕಿಕೊಂಡಾಗ, ಅದು ನಮ್ಮ ದೇಹದ ಉಷ್ಣತೆಯು ಆಚೆ ಹೋಗದಂತೆ ತಪ್ಪಿಸುವುದರಿಂದ ದೇಹದ ಶಾಖವು ಕಡಿಮೆ ಆಗುವುದು ತಪ್ಪುತ್ತದೆ. ಹೀಗಾಗಿ ಚಳಿಗಾಲದಲ್ಲಿ ಉಣ್ಣೆಯಿಂದ ಮಾಡಿದ ಬಟ್ಟೆ ಅಥವಾ ಸುಲಭವಾಗಿ ಉಷ್ಣತೆಯು ಹರಿದುಹೋಗದಂತಹ ಬಟ್ಟೆಗಳನ್ನು ಧರಿಸಿದರೆ, ಚಳಿಯಿಂದ ಸಂರಕ್ಷಿಸಿಕೊಳ್ಳಬಹುದು. ಇಂತಹ ಬಟ್ಟೆಗಳಿಲ್ಲದಿದ್ದರೂ, ಸುಮಾರಾಗಿ ಉಷ್ಣಾಂಶ ಹಿಡಿದಿಟ್ಟುಕೊಳ್ಳುವ ಬಟ್ಟೆಗಳನ್ನು ಎರಡು ಮೂರು ಪದರ ಕೂಡ ಧರಿಸಬಹುದು. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

Sri Purandara Dasa Bhajans

(Vedanta Centre of Sydney (Sri Ramakrishna Mission))

Tuesday, 15th July 2014
7pm—7.30pm: Aarathi, 7.30pm –9pm: Devaranama rendition
9.15pm: Prasadam

VENUE: 2 Stewart Street, Ermington, NSW 2115

Contact:
Anu Ananda: 04211 683 649, Uma Mohan: 97771 9229

ಸುಗಮ ಗಾನ ಸಮಾಜ ಸಾದರಪಡಿಸುತ್ತಿದೆ **ಕನ್ನಡ ಕ್ಯಾರಯೋಕೆ ಸಂಜೆ**

ಗಾನ ಸಮಾಜದ ಎಲ್ಲಾ ಸದಸ್ಯರಿಗೂ ಹಾಡಲು ಮುಕ್ತ ಅವಕಾಶ

ಅಂದು ವೇದಿಕೆಯಲ್ಲಿ ಹಲವಾರು ಹೊಸ ಪ್ರತಿಭೆಗಳ ಪರಿಚಯ ಮಾಡಲಾಗುವುದು.

ಸ್ಥಳ: WattleGrove Public School, Cressbrook Drive
NSW 2173
ಸಮಯ: 05:30pm

ದಿನ : 17th or 23rd Aug (Yet to be confirmed)

ಒಗ್ಗರಣೆ – ಕನ್ನಡ ಚಲನಚಿತ್ರ

Prakash Rai, Urvashi * in OGGARANE-
Kannada Movie Screening in Adelaide
Date & Time: Sunday the 10th August 2014

@ 2 PM Sharp

Place: Mercury Cinema, Morphett Street, Adelaide City
Ticket Price Adult: $15/- , Child, (12-18 yrs):$

10/- Entry Below 12 years FREE with Parents

For More Details Contact Umesh Nagasandra FT on 0401 034 456

ನಮ್ಮ
ಸುತ್ತಾ
ಮುತ್ತಾ

Birth centenary celebration of Pt.D.S.Garud

02-Aug-2014 At 6:30 PM

Strathfield Townhall, Redmyre Road, Strathfield

Entry: Adult $15/Child $10 (Including Dinner)

Contact: Aparna – 0400548713,
Nagashayana - 0400548752
bhavikasydney@gmail.com

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.